CC-O. In Public Domain. Digitized by eGangotri

ಶ್ರೀ ಸ್ಕಾಂದ ಮಹಾಪುರಾಣೋಕ್ತಂ

ಶಿವಕವಚಮ್

ಮತ್ತು

ಶ್ರೀ ಇಂದ್ರಾಕ್ಷೀ ಸ್ತೋತ್ರಮ್

(ಮೂಲ ಶ್ಲೋಕಗಳು – ಕನ್ನಡ ಭಾವಾನುವಾದ ಸಹಿತ)

ಟಿ.ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್

Sri Vidyabharathi Book Centre, Sringeri

ಚಿಕ್ಕಪೇಟೆ, ಬೆಂಗಳೂರು–560 053.

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸ್ಕಾಂದ ಮಹಾಪುರಾಣೋಕ್ತಂ

ಶಿವಕವಚಮ್

ಮತ್ತು

ಶ್ರೀ ಇಂದ್ರಾಕ್ಷೀಸ್ತೋತ್ರಮ್

(ಮೂಲಶ್ಲೋಕಗಳು – ಕನ್ನಡ ಭಾವಾನುವಾದ ಸಹಿತ)

ದಪ್ಪಕ್ಷರಗಳ ಶುದ್ಧಪ್ರತಿ

ಸಂಗ್ರಹ – ಭಾವಾನುವಾದ
ಶ್ರೀ ಟಿ.ಎಸ್. ಪದ್ಮನಾಭಶರ್ಮಾ, ಎಂ.ಎ.
ಬೆಂಗಳೂರು.

ಶ್ರೀ ವಿದ್ಯಾ ಭಾರತೀ
ಪುಸ್ತಕ ಕೇಂದ್ರ
ಭಾರತೀ ಬೀದಿ, ಶೃಂಗೇರಿ – 577 139

ಅಧಿಕೃತ ಮಾರಾಟಗಾರರು :
ಟಿ. ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್
ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು
234, ಚಿಕ್ಕಪೇಟೆ, ಬೆಂಗಳೂರು : 560 053
ದೂ : 080-2225 8217 • ಮೊ : 98802 25598

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಷ್ಕೃತ ದ್ವಿತೀಯ ಮುದ್ರಣ :

© ಹಕ್ಕುಗಳು ಪ್ರಕಾಶಕರಿಗೆ ಸೇರಿದೆ.

ಪರಿಷ್ಕರಣೆ :
ಟಿ.ಎಸ್. ಸುರೇಶ್ ಬಿ.ಎಸ್ಸಿ., (ಆನರ್ಸ್)
ಬನಶಂಕರಿ, ಬೆಂಗಳೂರು–560 070.

ವಿಷಯಸೂಚಿಕೆ : ಪುಟ ಸಂಖ್ಯೆ

* ಶಿವಕವಚಸ್ತೋತ್ರಮ್ ..... 4 ರಿಂದ 10
* ಶಿವಕವಚದ ಭಾವಾನುವಾದ ..... 11 ರಿಂದ 20
* ಶಿವಾಷ್ಟೋತ್ತರ ಶತನಾಮಾವಳಿಃ ..... 21 ರಿಂದ 22
* ಇಂದ್ರಾಕ್ಷೀ ಸ್ತೋತ್ರಮ್ ..... 23 ರಿಂದ 26
* ಇಂದ್ರಾಕ್ಷೀ ಸ್ತೋತ್ರದ ಭಾವಾನುವಾದ ..... 27 ರಿಂದ 28

ಡಿ.ಟಿ.ಪಿ. :
ಸ್ಪಂದನ ಗ್ರಾಫಿಕ್ಸ್
ಬೆಂಗಳೂರು – 560 078.

ಮುದ್ರಣ :
ಶ್ರೀ ವೆಂಕಟೇಶ್ವರ ಪ್ರಿಂಟಿಂಗ್ ಪ್ರೆಸ್
ಬೆಂಗಳೂರು–560 078. ದೂರವಾಣಿ : 22444763

Sri Vidyabharathi Book Centre, Shringeri

CC-O. In Public Domain. Digitized by eGangotri

ಶ್ರೀ ಶಿವಕವಚ

ದೇವತಾ ಸ್ತೋತ್ರದ ಒಂದು ಬಗೆ ಕವಚ. ಯಾವುದೇ ಇಷ್ಟದೇವತೆಯ ಪುಣ್ಯಕರ ನಾಮಗಳು ತನ್ನನ್ನು ಕವಚದಂತೆ ಸರ್ವದಾ ಕಾಪಾಡಲಿ ಎಂಬುದೇ ಕವಚಗಳ ಪಾರಾಯಣದ ಹಿಂದಿನ ಉದ್ದಿಶ್ಯ. ಈ ಬಗೆಯನ್ನು 'ವರ್ಮ' ಎಂತಲೂ ಹೇಳುತ್ತಾರೆ.

ಸ್ತೋತ್ರ ಪ್ರಕಾರಗಳಲ್ಲಿ ಹೃದಯ, ಸಹಸ್ರನಾಮ, ಕವಚ ಮುಂತಾದವು ಪ್ರಸಿದ್ಧವಾಗಿವೆ. ಹೀಗೆಯೇ ನಾರಾಯಣಕವಚ, ಲಕ್ಷ್ಮೀ ಹೃದಯ, ಶಿವಕವಚ ಮೊದಲಾದವು ಭಕ್ತರ ಆದರಕ್ಕೆ ಪಾತ್ರವಾಗಿವೆ.

ಶಿವಕವಚವು ಋಷಭ ಮಹಾಮುನಿಯು ಭದ್ರಾಯು ಎಂಬ ರಾಜಕುಮಾರನಿಗೆ ಉಪದೇಶಿಸಲ್ಪಟ್ಟ ಸ್ತೋತ್ರ ಭಾಗವಾಗಿದೆ. ಸ್ಕಾಂದ ಪುರಾಣದ ಬ್ರಹ್ಮೋತ್ತರಖಂಡದ ಹನ್ನೆರಡನೆಯ ಅಧ್ಯಾಯದಲ್ಲಿ ಈ ಭಾಗವಿದೆ. ಮಹರ್ಷಿಗಳು ರಾಜಕುಮಾರನಿಗೆ ಅನೇಕ ಬಗೆಯಾಗಿ ಧರ್ಮೋಪದೇಶ ಮಾಡಿದ ನಂತರ ಅವುಗಳ ಫಲಸಾರವಾದ ಶಿವಕವಚವನ್ನು ಹೇಳುತ್ತಾರೆ.

ಶಿವಕವಚಕ್ಕೆ ಭಗವಾನ್ ಋಷಭನೇ ಋಷಿ. 'ತ್ರಿಷ್ಟುಪ್' ಎನ್ನುವುದು ಛಂದೋರೀತಿ. ಸದಾಶಿವನೇ ಇಲ್ಲಿನ ಉಪಾಸ್ಯ ದೇವತೆ. 'ಓಂ' ಎಂಬುದೇ ಬೀಜಾಕ್ಷರವಾಗಿದೆ. 'ನಮಃ' – ಇದು ಸಾಮರ್ಥ್ಯ ನೀಡುವ ಶಕ್ತಿಯಾಗಿದೆ. 'ಶಿವಾಯ' ಎಂಬುದು ಈ ಶಕ್ತಿಯ ಮೂಲಧ್ಯೇಯವಾಗಿದೆ.

'ಓಂ ನಮಃ ಶಿವಾಯ' – ಷಡಕ್ಷರೀ ಮಂತ್ರದ ಜಪ ಈ ಕವಚ ಸ್ತೋತ್ರ ಪಾರಾಯಣಕ್ಕೆ ಮೊದಲು ಮತ್ತು ನಂತರ ಮಾಡಿದರೆ ಅಧಿಕ ಫಲ ಸಿಗುತ್ತದೆ. ಶಿವಕವಚದ ನಿತ್ಯ ಪಾರಾಯಣದಿಂದ ಅದ್ಭುತ ಫಲ ಸಿಗುವುದರಲ್ಲಿ ಸಂದೇಹವಿಲ್ಲ. ಶಿವ–ಮಂಗಲಕರವಾದ ಭಗವಂತನು ಸಾಧಕರಿಗೆ ಶುಭವನ್ನೀಡಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿವಕವಚ ಸ್ತೋತ್ರಮ್

ಅಸ್ಯ ಶ್ರೀ ಶಿವಕವಚಸ್ತೋತ್ರ ಮಹಾಮಂತ್ರಸ್ಯ ಋಷಭ ಯೋಗೀಶ್ವರಋಷಿಃ। ಶ್ರೀ ಸಾಂಬಸದಾಶಿವೋದೇವತಾ। ಅನುಷ್ಟುಪ್ ಛಂದಃ। ಓಂ ಬೀಜಂ ನಮಃ ಶಕ್ತಿಃ। ಶಿವಾಯೇತಿ ಕೀಲಕಮ್ ಶ್ರೀ ಸಾಂಬ ಸದಾಶಿವ ಪ್ರೀತ್ಯರ್ಥಂ ಶಿವಕವಚ ಸ್ತೋತ್ರ ಪಾರಾಯಣೇ ವಿನಿಯೋಗಃ॥

ಅಥ ನ್ಯಾಸಃ॥ ಓಂ ನಮೋ ಭಗವತೇ ಜ್ವಲಜ್ವಲ ಮಹಾರುದ್ರಾಯ ಜ್ವಾಲಾಮಾಲಿನೇ। ಓಂ ಶ್ರೀಂ-ಹ್ರೀಂ-ಕ್ಲೀಂ-ಓಂ ಸರ್ವಜ್ಞಶಕ್ತಿಧಾಮ್ನೇ ಅಂಗುಷ್ಠಾಭ್ಯಾಂ ನಮಃ॥ ಓನ್ನಮೋಭಗವತೇ ಜ್ವಲಜ್ವಲ ಮಹಾರುದ್ರಾಯ ಜ್ವಾಲಾಮಾಲಿನೇ॥ ಓಂ-ಶ್ರೀ- ಹ್ರೀಂ-ಕ್ಲೀಂ-ಓಂ- ನಂ-ಹ್ರೀಂ-ತೃಪ್ತಿ ಶಕ್ತಿಧಾಮ್ನೇ ತರ್ಜನೀಭ್ಯಾಂ ನಮಃ। ಓನ್ನಮೋ ಭಗವತೇ ಜ್ವಲಜ್ವಲ ಮಹಾರುದ್ರಾಯ ಜ್ವಾಲಾಮಾಲಿನೇ ಓಂ-ಶ್ರೀಂ- ಹ್ರೀಂ-ಕ್ಲೀಂ-ಮಂ-ಮಂ-ಹ್ರೂಂ-ಅನಾದಿಬೋಧಶಕ್ತಿಧಾಮ್ನೇ ಮಧ್ಯಮಾಭ್ಯಾಂನಮಃ। ಓನ್ನಮೋ ಭಗವತೇ ಜ್ವಲಜ್ವಲ ಮಹಾರುದ್ರಾಯ ಜ್ವಾಲಾಮಾಲಿನೇ ಓಂ-ಶ್ರೀಂ-ಹ್ರೀಂ-ಕ್ಲೀಂ- ಶ್ರೀಂ-ಹ್ಸೌಂ ಸ್ವತಂತ್ರ ಶಕ್ತಿಧಾಮ್ನೇ ಅನಾಮಿಕಾಭ್ಯಾಂ ನಮಃ। ಓನ್ನಮೋ ಭಗವತೇಜ್ವಲಜ್ವಲ ಮಹಾರುದ್ರಾಯ ಜ್ವಾಲಾಮಾಲಿನೇ ಓಂ-ಶ್ರೀಂ-ಹ್ರೀಂ-ಕ್ಲೀಂ- ವಾಂ-ಹ್ಸೌಂ ಅಲುಪ್ತ ಶಕ್ತಿಧಾಮ್ನೇ ಕನಿಷ್ಠಿಕಾಭ್ಯಾಂ ನಮಃ। ಓನ್ನಮೋ ಭಗವತೇ ಜ್ವಲಜ್ವಲ ಮಹಾರುದ್ರಾಯ ಜ್ವಾಲಾಮಾಲಿನೇ ಓಂ-ಶ್ರೀಂ-ಹ್ರೀಂ-ಕ್ಲೀಂ-ಯಂ-ಹ್ರಃ ಅನಂತಶಕ್ತಿಧಾಮ್ನೇ ಕರತಲಕರ ಪೃಷ್ಠಾಭ್ಯಾಂ ನಮಃ ಹೃದಯಾದಿನ್ಯಾಸಃ ಭೂರ್ಭುವಸ್ಸುವರೋಮಿತಿ ದಿಗ್ಬಂಧಃ॥

ಅಥ ಧ್ಯಾನಮ್॥ ವಜ್ರದಂಷ್ಟ್ರಂ ತ್ರಿನಯನಂ ಕಾಲಕಂಠಮರಿಂದಮಮ್। ಸಹಸ್ರಕರಮತ್ಯುಗ್ರಂ ವಂದೇ ಶಂಭುಮುಮಾಪತಿಮ್। ಅಥಾಪರಂ ಸರ್ವಪುರಾಣಗುಹ್ಯಂನಿಶ್ಶೇಷಪಾಪೌಘಹರಂ ಪವಿತ್ರಮ್। ಜಯಪ್ರದಂ ಸರ್ವವಿಪತ್ಪ್ರಮೋಚನಂ ವಕ್ಷ್ಯಾಮಿ ಶೈವಂ ಕವಚಂ ಹಿತಾಯತೇ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಋಷಭ ಉವಾಚ ।। ನಮಸ್ಕೃತ್ವಾ ಮಹಾದೇವಂ ವಿಶ್ವವ್ಯಾಪಿನಮೀಶ್ವರಮ್। ವಕ್ಷ್ಯೇ ಶಿವಮಯಂ ವರ್ಮ ಸರ್ವರಕ್ಷಾಕರಂ ನೃಣಾಮ್ ।।೧।।

ಶುಚೌ ದೇಶೇ ಸಮಾಸೀನೇ ಯಥಾವತ್ಕಲ್ಪಿತಾಸನಃ । ಜಿತೇಂದ್ರಿಯೋ ಜಿತಪ್ರಾಣಶ್ಚಿನ್ತಯೇಚ್ಛಿವಮವ್ಯಯಂ ।।೨।। ಹೃತ್ಪುಣ್ಡರೀಕಾನ್ತರಸನ್ನಿವಿಷ್ಟಂ ಸ್ವತೇಜಸಾ ವ್ಯಾಪ್ತನಭೋಽವಕಾಶಮ್। ಅತೀಂದ್ರಿಯಂ ಸೂಕ್ಷ್ಮಮನನ್ತಮಾದ್ಯಂ ಧ್ಯಾಯೇತ್ಪರಾನನ್ದಮಯಂ ಮಹೇಶಮ್ ।।೩।। ಧ್ಯಾನಾವಧೂತಾಖಿಲಕರ್ಮಬಂಧಶ್ಚಿರಂ ಚಿದಾನಂದನಿಮಗ್ನ ಚೇತಾಃ। ಷಡಕ್ಷರನ್ಯಾಸ ಸಮಾಹಿತಾತ್ಮಾ ಶೈವೇನ ಕುರ್ಯಾತ್ ಕವಚೇನ ರಕ್ಷಾಮ್ ।।೪।।

ಕವಚ

ಮಾಂ ಪಾತು ದೇವೋಽಖಿಲದೇವತಾತ್ಮಾ ಸಂಸಾರಕೂಪೇ ಪತಿತಂ ಗಭೀರೇ ತನ್ನಾಮ ದಿವ್ಯಂ ವರಮಂತ್ರಮೂಲಂ ಧುನೋತು ಮೇ ಸರ್ವಮಘಂ ಹೃದಸ್ಥಮ್ ।।೫।। ಸರ್ವತ್ರಂ ಮಾಂ ರಕ್ಷತು ವಿಶ್ವಮೂರ್ತಿರ್ಜ್ಯೋತಿರ್ಮಯಾನಂದ ಘನಶ್ಚಿದಾತ್ಮಾ। ಅಣೋರಣೀಯಾನುರು ಶಕ್ತಿರೇಕಃ ಸ ಈಶ್ವರಃ ಪಾತು ಭಯಾದಶೇಷಾತ್ ।।೬।। ಯೋ ಭೂಸ್ವರೂಪೇಣ ಬಿಭರ್ತಿ ವಿಶ್ವಂ ಪಾಯಾತ್ಸಭೂಮೇರ್ಗಿರಿಶೋಽಷ್ಟಮೂರ್ತಿಃ। ಯೋಽಪಾಂ ಸ್ವರೂಪೇಣ ನೃಣಾಂ ಕರೋತಿ ಸಂಜೀವನಂ ಸೋಽವತು ಮಾಂ ಜಲೇಭ್ಯಃ ।।೭।। ಕಲ್ಪಾವಸಾನೇ ಭುವನಾನಿ ದಗ್ಧ್ವಾ ಸರ್ವಾಣಿ ಯೋ ನೃತ್ಯತಿ ಭೂರಿಲೀಲಃ। ಸ ಕಾಲರುದ್ರೋಽವತು ಮಾಂ ದವಾಗ್ನೇರ್ವಾತ್ಯಾದಿಭೇತೇರಖಿಲಾಚ್ಚತಾಪಾತ್ ।।೮।। ಪ್ರದೀಪ್ತವಿದ್ಯುತ್ಕನಕಾವಭಾಸೋವಿದ್ಯಾವರಾಭೀತಿಕುಠಾರಪಾಣಿಃ ಚತುರ್ಮುಖಸ್ತತ್ಪುರುಷಸ್ತ್ರಿನೇತ್ರಃ ಪ್ರಾಚ್ಯಾಂ ಸ್ಥಿತಂ ರಕ್ಷತು ಮಾಮಜಸ್ರಮ್ ।।೯।। ಕುಠಾರಖೇಟಾಂಕುಶಪಾಶಶೂಲ ಕಪಾಲಢಕ್ಕಾಕ್ಷಗುಣಾನ್ ದಧಾನಃ। ಚತುರ್ಮುಖೋ ನೀಲರುಚಿಸ್ತ್ರಿನೇತ್ರಃ ಪಾಯಾದಘೋರೋದಿಶಿ ದಕ್ಷಿಣಸ್ಯಾಮ್ ।।೧೦।। ಕುನ್ದೇನ್ದು ಶಂಖ-

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಫಟಿಕಾವಭಾಸೋ ವೇದಾಕ್ಷಮಾಲಾವರದಾಭಯಾಙ್ಕಃ।
ತ್ರ್ಯಕ್ಷಶ್ಚತುರ್ವಕ್ತ್ರ ಉರುಪ್ರಭಾವಃ ಸದ್ಯೋಧಿಜಾತೋಽವತು ಮಾಂ
ಪ್ರತೀಚ್ಯಾಮ್ ॥೧೧॥ ವರಾಕ್ಷಮಾಲಾಭಯಟಂಕಹಸ್ತಃ
ಸರೋಜಕಿಞ್ಜಲ್ಕಸಮಾನವರ್ಣಃ। ತ್ರಿಲೋಚನಶ್ಚಾರು ಚತುರ್ಮುಖೋ
ಮಾಂ। ಪಾಯಾದುದೀಚ್ಯಾಂ ದಿಶಿ ವಾಮದೇವಃ ॥೧೨॥
ವೇದಾಭಯೇಷ್ವಙ್ಕುಶ ಟಂಕಪಾಶ ಕಪಾಲಧಕ್ಕಾಕ್ಷಕ-
ಶೂಲಪಾಣಿಃ। ಸಿತದ್ಯುತಿಃ ಪಂಚಮುಖೋಽವತಾನ್ಮಾಮೀಶಾನ
ಊರ್ಧ್ವಂ ಪರಮಪ್ರಕಾಶಃ ॥೧೩॥ ಮೂರ್ಧಾನಮವ್ಯಾನ್ಮಮ
ಚಂದ್ರಮೌಳಿಃ ಫಾಲಂ ಮಮಾವ್ಯಾದಥ ಫಾಲನೇತ್ರಃ। ನೇತ್ರೇ
ಮಮಾವ್ಯಾದ್ಭಗನೇತ್ರಹಾರೀ ನಾಸಾಂ ಸದಾ ರಕ್ಷತು ವಿಶ್ವನಾಥಃ
॥೧೪॥ ಪಾಯಾಚ್ಛ್ರುತೀ ಮೇ ಶ್ರುತಿಗೀತಕೀರ್ತಿಃ ಕಪೋಲ-
ಮವ್ಯಾತ್ಸತತಂ ಕಪಾಲೀ ವಕ್ತ್ರಂ ಸದಾ ರಕ್ಷತು ಪಂಚವಕ್ತ್ರೋ ಜಿಹ್ವಾಂ
ಸದಾ ರಕ್ಷತು ವೇದಜಿಹ್ವಃ॥೧೫॥ ಕಂಠಂ ಗಿರೀಶೋಽವತು ನೀಲಕಣ್ಠಃ
ಪಾಣಿದ್ವಯಂ ಪಾತು ಪಿನಾಕಪಾಣಿಃ॥ ದೋರ್ಮೂಲಮವ್ಯಾನ್ಮಮ
ಧರ್ಮಬಾಹುರ್ವಕ್ಷಸ್ಥಲಂ ದಕ್ಷಮಖಾನ್ತಕೋಽವ್ಯಾತ್ ॥೧೬॥
ಮಮೋದರಂ ಪಾತು ಗಿರೀನ್ದ ಧನ್ವಾ ಮಧ್ಯಂ ಮಮಾವ್ಯಾನ್ಮದ-
ನಾನ್ತಕಾರೀ। ಹೇರಂಬತಾತೋ ಮಮ ಪಾತು ನಾಭಿಂ ಪಾಯಾತ್ಕಟಿಂ
ಧೂರ್ಜಟಿರೀಶ್ವರೋಮೇ ॥೧೭॥ ಊರುದ್ವಯಂ ಪಾತು
ಕುಬೇರಮಿತ್ರೋ ಜಾನುದ್ವಯಂ ಮೇ ಜಗದೀಶ್ವರೋಽವ್ಯಾತ್।
ಜಂಘಾಯುಗಂ ಪುಙ್ಗವಕೇತುರವ್ಯಾತ್ಪಾದೌ ಮಮಾವ್ಯಾತ್ಸುರ-
ವನ್ದ್ಯಪಾದಃ ॥೧೮॥ ಮಹೇಶ್ವರಃ ಪಾತು ದಿನಾದಿಯಾಮೇ ಮಾಂ
ಮಧ್ಯಯಾಮೇಽವತು ವಾಮದೇವಃ। ತ್ರಿಲೋಚನಃ ಪಾತು
ತೃತೀಯಯಾಮೇ ವೃಷಧ್ವಜಃ ಪಾತು ದೀನಾನ್ತ್ಯಯಾಮೇ ॥೧೯॥
ಪಾಯಾನ್ನಿಶಾದೌ ಶಶಿಶೇಖರೋ ಮಾಂ ಗಂಗಾಧರೋ ರಕ್ಷತು ಮಾಂ
ನಿಶೀಥೇ। ಗೌರೀಪತಿಃ ಪಾತು ನಿಶಾವಸಾನೇ ಮೃತ್ಯುಞ್ಜಯೋ ರಕ್ಷತು
ಸರ್ವಕಾಲಮ್ ॥೨೦॥ ಅನ್ತಃ ಸ್ಥಿತಂ ರಕ್ಷತು ಶಙ್ಕರೋ ಮಾಂ ಸ್ಥಾಣುಃ
ಸದಾ ಪಾತು ಬಹಿಃ ಸ್ಥಿತಂ ಮಾಮ್। ತದನ್ತರೇ ಪಾತು ಪತಿಃ ಪಶೂನಾಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಸದಾಶಿವೋ ರಕ್ಷತು ಮಾಂ ಸಮನ್ತಾತ್॥೨೧॥ ತಿಷ್ಠನ್ತಮವ್ಯಾದ್ಭುವನೈಕ-
ನಾಥಃ ಪಾಯಾದ್ ವ್ರಜನ್ತಂ ಪ್ರಮತಾಧಿನಾಥಃ। ವೇದಾನ್ತ-
ವೇದ್ಯೋಽವತು ಮಾಂ ನಿಷಣ್ಣಂ ಮಾಮವ್ಯಯಃ ಪಾತು ಶಿವಃ
ಶಯಾನಮ್ ॥೨೨॥ ಮಾರ್ಗೇಷು ಮಾಂ ರಕ್ಷತು ನೀಲಕಂಠಃ
ಶೈಲಾದಿದುರ್ಗೇಷು ಪುರತ್ರಯಾರಿಃ ಅರಣ್ಯವಾಸಾದಿಮಹಾಪ್ರವಾಸೇ
ಪಾಯಾನ್ಮೃಗವ್ಯಾಧ ಉದಾರಶಕ್ತಿಃ ॥೨೩॥ ಕಲ್ಪಾನ್ತಕಾಟೋಪಪಟು-
ಪ್ರಕೋಪ ಸ್ಫುಟಾಟ್ಟಹಾಸೋಚ್ಚಲಿತಾಣ್ಡಕೋಶಃ ಘೋರಾರಿ
ಸೇನಾರ್ಣವದುರ್ನಿವಾರ ಮಹಾಭಯಾದ್ರಕ್ಷತು ವೀರಭದ್ರಃ ॥೨೪॥
ಪತ್ತ್ಯಶ್ವಮಾತಙ್ಗ ರಥಾವರೂಥ ಸಹಸ್ರಲಕ್ಷಾಯುತಕೋಟಿ-
ಭೀಷಣಮ್॥ ಅಕ್ಷೌಹಿಣೀನಾಂ ಶತಮಾತತಾಯಿನಾಂ ಛಿನ್ದ್ಯಾನ್ಮೃಡೋ
ಘೋರಕುಠಾರಧಾರಯಾ ॥೨೫॥ ನಿಹನ್ತುದಸ್ಯೂನ್ ಪ್ರಲಯಾನ-
ಲಾರ್ಚಿರ್ಜ್ವಲತ್ತ್ರಿಶೂಲಂ ತ್ರಿಪುರಾನ್ತಕಸ್ಯ। ಶಾರ್ದೂಲಸಿಂಹರ್ಕ್ಷವೃಕಾದಿ-
ಹಿಂಸ್ರಾನ್ ಸಂತ್ರಾಸಯತ್ವೀಶ ಧನುಃ ಪಿನಾಕಃ ॥೨೬॥ ದುಃಸ್ವಪ್ನ-
ದುಶ್ಶಕುನದುರ್ಗತಿದೌರ್ಮನಸ್ಯದುರ್ಭಿಕ್ಷ ದುರ್ವ್ಯಸನ ದುಸ್ಸಹ-
ದುರ್ಯಶಾಂಸಿ। ಉತ್ಪಾತತಾಪವಿಷಭೀತಿಮಸದ್ಗ್ರಹಾರ್ತಿಂ ವ್ಯಾಧೀಂಶ್ಚ
ನಾಶಯತು ಮೇ ಜಗತಾಮಧೀಶಃ ॥೨೭॥ **ಸಹಸ್ರಾಕ್ಷರ ಗದ್ಯ ಮಂತ್ರ**
''ಓಂ ನಮೋ ಭಗವತೇ, ಸದಾಶಿವಾಯ, ಸಕಲ ತತ್ವಾತ್ಮಕಾಯ,
ಸರ್ವಮಂತ್ರಸ್ವರೂಪಾಯ, ಸರ್ವಯನ್ತ್ರಾಧಿಷ್ಠಿತಾಯ ಸರ್ವತನ್ತ್ರ-
ಸ್ವರೂಪಾಯ ಸಕಲತತ್ವವಿದೂರಾಯ ॥'' ''ಬ್ರಹ್ಮರುದ್ರಾವತಾರಿಣೇ,
ನೀಲಕಂಠಾಯ, ಪಾರ್ವತೀಮನೋಹರಪ್ರಿಯಾಯ, ಸೋಮ-
ಸೂರ್ಯಾಗ್ನಿಲೋಚನಾಯ, ಭಸ್ಮೋದ್ಧೂಳಿತ ವಿಗ್ರಹಾಯ, ಮಹಾಮಣಿ-
ಮುಕುಟಧಾರಣಾಯ, ಮಾಣಿಕ್ಯಭೂಷಣಾಯ, ಸೃಷ್ಟಿಸ್ಥಿತಿಪ್ರಲಯ-
ಕಾಲರೌದ್ರಾವತಾರಾಯ, ದಕ್ಷಾಧ್ವರಧ್ವಂಸಕಾಯ, ಮಹಾಕಾಲ-
ಭೇದನಾಯ, ಮೂಲಾಧಾರೈಕನಿಲಯಾಯ, ತತ್ತ್ವಾತೀತಾಯ,
ಗಂಗಾಧರಾಯ, ಸರ್ವದೇವಾಧಿದೇವಾಯ, ಷಡಾಶ್ರಯಾಯ,
ವೇದನ್ತಸಾರಾಯ, ತ್ರಿವರ್ಗಸಾಧನಾಯ, ಅನನ್ತಕೋಟಿ
ಬ್ರಹ್ಮಾಣ್ಡನಾಯಕಾಯ, ಅನನ್ತವಾಸುಕಿತಕ್ಷಕ ಕರ್ಕೋಟಕಶಂಖಕುಲಿಕ

Siddhanta eGangotri Gyaan Central

CC-O. In Public Domain. Digitized by eGangotri

ಪದ್ಮಮಹಾಪದ್ಮೇತ್ಯಷ್ಟ ಮಹಾನಾಗಕುಲಭೂಷಣಾಯ''। ''ಪ್ರಣವ–
ಸ್ವರೂಪಾಯ, ಚಿದಾಕಾಶಾಯ, ಆಕಾಶದಿಕ್ಸ್ವರೂಪಾಯ,
ಗ್ರಹನಕ್ಷತ್ರಮಾಲಿನೇ, ಸಕಲಾಯ, ಕಲಙ್ಕರಹಿತಾಯ, ಸಕಲ–
ಲೋಕೈಕಕರ್ತ್ರೇ, ಸಕಲಲೋಕೈಕಭರ್ತ್ರೇ, ಸಕಲಲೋಕೈಕಸಂಹರ್ತ್ರೇ,
ಸಕಲಲೋಕೈಕಗುರವೇ, ಸಕಲಲೋಕೈಕಸಾಕ್ಷಿಣೇ, ಸಕಲನಿಗಮ–
ಗುಹ್ಯಾಯ, ಸಕಲವೇದಾನ್ತಪಾರಗಾಯ, ಸಕಲವರಪ್ರದಾಯ,
ಸಕಲದುರಿತಾರ್ತಿಭಞ್ಜನಾಯ, ಸಕಲಜಗದಭಯಂಕರಾಯ,
ಶಶಾಂಕಶೇಖರಾಯ, ಶಾಶ್ವತನಿಜಾವಾಸಾಯ''। ''ನೀರೂಪಾಯ,
ನಿರಾಭಾಸಾಯ, ನಿರಾಮಯಾಯ, ನಿರ್ಲೋಭಾಯ, ನಿರ್ಮದಾಯ,
ನಿಶ್ಚಿನ್ತಾಯ, ನಿರಹಙ್ಕಾರಾಯ, ನಿರಙ್ಕುಶಾಯ, ನಿಷ್ಕಲಙ್ಕಾಯ,
ನಿರ್ಗುಣಾಯ, ನಿರುಪಮಾಯ, ನಿಷ್ಕಾಮಾಯ, ನಿರುಪಪ್ಲವಾಯ,
ನಿರವದ್ಯಾಯ, ನಿರನ್ತರಾಯ, ನಿಷ್ಕಾರಣಾಯ, ನಿರಾತಙ್ಕಾಯ,
ನಿಷ್ಪಪಂಚಾಯ, ನಿರ್ದ್ವಂದಾಯ, ನಿಸ್ಸಙ್ಗಾಯ, ನಿರ್ಮಲಾಯ,
ನಿರಾಧಾರಾಯ, ನೀರಾಗಾಯ, ನಿಷ್ಕ್ರೋಧಾಯ, ನಿರ್ಗಮಾಯ,
ನಿಷ್ಪಾಪಾಯ, ನಿರ್ಭಯಾಯ, ನಿರ್ವಿಕಲ್ಪಾಯ, ನಿರ್ಭೇದಾಯ,
ನಿಷ್ಕ್ರಿಯಾಯ, ನಿಸ್ತುಲಾಯ, ನಿಸ್ಸಂಶಯಾಯ, ನಿರಂಜನಾಯ,
ನಿತ್ಯರೂಪವಿಭವಾಯ, ನಿರುಪಮವಿಭವಾಯ, ನಿತ್ಯಶುದ್ಧಬುದ್ಧ
ಪರಿಪೂರ್ಣ ಸಚ್ಚಿದಾನನ್ದಾದ್ವಯಾಯ, ಪರಮಶಾನ್ತಸ್ವರೂಪಾಯ,
ತೇಜೋರೂಪಾಯ, ತೇಜೋಮಯಾಯ, ''ಜಯ ಜಯಮಹಾರುದ್ರ,
ಮಹಾರೌದ್ರ, ಭದ್ರಾವತಾರ, ದುಃಖದಾವದಾರಣ'' ಮಹಾಭೈರವ,
ಕಾಲಭೈರವ, ಕಲ್ಪಾನ್ತಭೈರವ, ಕಪಾಲಮಾಲಾಧರ, ಖಟ್ವಾಙ್ಗಖಡ್ಗ
ಚರ್ಮಪಾಶಾಂಕುಶ ಡಮರುಶೂಲಚಾಪಬಾಣಗದಾಶಕ್ತಿಭಿಂಡಿ
ಪಾಲತೋಮರಮುಸಲ ಮುದ್ಗರಪ್ರಾಸಪಟ್ಟಿಶಪರಶುಪರಿಘ–
ಭುಶುಣ್ಡೀಶತಘ್ನೀ ಚಕ್ರಾದ್ಯಾಯುಧಭೀಷಣಕರ, ಸಹಸ್ರಮುಖ,
ದಂಷ್ಟ್ರಾಕರಾಲವದನ, ವಿಕಟಾಟ್ಟಹಾಸವಿಸ್ಫಾರಿತಬ್ರಹ್ಮಾಂಡಮಣ್ಡಲ,
ನಾಗೇಂದ್ರಕುಣ್ಡಲ, ನಾಗೇಂದ್ರಹಾರ, ನಾಗೇಂದ್ರವಲಯ, ನಾಗೇಂದ್ರ–
ಚರ್ಮಧರ, ಮೃತ್ಯುಞ್ಜಯ, ತ್ರ್ಯಮ್ಬಕ, ತ್ರಿಪುರಾನ್ತಕ, ವಿಶ್ವರೂಪ,

Sri Vidyabharathi Book Centre, Sringeri

CC-O. In Public Domain. Digitized by eGangotri

ವಿರೂಪಾಕ್ಷ, ವಿಶ್ವೇಶ್ವರ, ವೃಷಭವಾಹನ, ವಿಷಭೂಷಣ, ವಿಶ್ವತೋಮುಖ, ಸರ್ವತೋಮುಖ ಮಾಂ ರಕ್ಷರಕ್ಷ, ಜ್ವಲಜ್ವಲ ಮಹಾಮೃತ್ಯುಭಯಮಪಮೃತ್ಯುಭಯಂ ನಾಶಯ ನಾಶಯ, ರೋಗಭಯಮುತ್ಸಾದಯೋತ್ಸಾದಯ, ವಿಷಸರ್ಪಭಯಂ ಶಮಯ ಶಮಯ, ಚೋರಾನ್ಮಾರಯ ಮಾರಯ ಮಮ ಶತ್ರೂನುಚ್ಚಾಟ-ಯೋಚ್ಚಾಟಯ, ತ್ರಿಶೂಲೇನ ವಿದಾರಯ ವಿದಾರಯ, ಕುಠಾರೇಣ ಭಿನ್ದಿ ಭಿನ್ದಿ ಖಡ್ಗೇನ ಛಿನ್ದಿ ಛಿನ್ದಿ ಖಟ್ವಾಂಗೇನ ವಿಪೋಥಯ ವಿಪೋಥಯ, ಮುಸಲೇನ ನಿಷ್ಪೇಷಯ ನಿಷ್ಪೇಷಯ, ಬಾಣೈಃ ಸನ್ತಾಡಯ, ಸನ್ತಾಡಯ, ರಕ್ಷಾಂಸಿ ಭೀಷಯ ಭೀಷಯ, ಅಶೇಷಭೂತಾನಿ ವಿದ್ರಾವಯ ವಿದ್ರಾವಯ, ಕೂಷ್ಮಾಣ್ಡ ಭೂತವೇತಾಲ ಮಾರೀಗಣಬ್ರಹ್ಮರಾಕ್ಷಸ-ಗಣಾನ್ ಸನ್ತ್ರಾಸಯ ಸನ್ತ್ರಾಸಯ, ಮಮಾಭಯಂ ಕುರು ಕುರು, ವಿತ್ರಸ್ತಂ, ಮಾಮಾಶ್ವಾಸಯಾಶ್ವಾಸಯ, ನರಕಮಹಾಭಯಾನ್ಮಾ-ಮುದ್ಧರೋದ್ಧರ, ಸಂಜೀವಯ ಸಂಜೀವಯ, ಕ್ಷುತ್ತೃಡ್ಭ್ಯಾಂಮಾಮಾ-ಪ್ಯಾಯಯಾಪ್ಯಾಯಯ, ದುಃಖಾತುರಂ ಮಾಮಾನನ್ದಯಾನನ್ದಯ, ಶಿವಕವಚೇನಮಾಮಾಚ್ಛಾದಯಾಚ್ಛಾದಯ, ಮೃತ್ಯುಂಜಯ, ತ್ರ್ಯಮ್ಬಕ, ಸದಾಶಿವ, ನಮಸ್ತೇ ನಮಸ್ತೇ ನಮಸ್ತೇ **॥ಫಲಶ್ರುತಿಃ॥** ಋಷಭ ಉವಾಚ ॥ ಇತ್ಯೇತತ್ ಕವಚಂ ಶೈವಂ ವರದಂ ವ್ಯಾಹೃತಂ ಮಯಾ । ಸರ್ವಬಾಧಾಪ್ರಶಮನಂ ರಹಸ್ಯಂ ಸರ್ವದೇಹಿನಾಮ್ ॥೨೮॥ ಯಃ ಸದಾ ಧಾರಯೇನ್ಮರ್ತ್ಯಃ ಶೈವಂ ಕವಚಮುತ್ತಮಮ್ । ನ ತಸ್ಯ ಜಾಯತೇ ಕ್ವಾಪಿ ಭಯಂ ಶಂಭೋರನುಗ್ರಹಾತ್ ॥೨೯॥ ಕ್ಷೀಣಾಯಪ್ರಾಪ್ತ-ಮೃತ್ಯುರ್ವಾ ಮಹಾರೋಗಹತೋಽಪಿವಾ । ಸದ್ಯಃ ಸುಖಮವಾಪ್ನೋತಿ ದೀರ್ಘಮಾಯುಶ್ಚವಿನ್ದತಿ ॥೩೦॥ ಸರ್ವದಾರಿದ್ರ್ಯಶಮನಂ ಸೌಮಂಗಲ್ಯ ವಿವರ್ಧನಮ್ । ಯೋ ಧತ್ತೇ ಕವಚಂ ಶೈವಂ ಸ ದೇವೈರಪಿ ಪೂಜ್ಯತೇ ॥೩೧॥ ಮಹಾಪಾತಕ ಸಂಘಾತೈರ್ಮುಚ್ಯತೇಚೋಪಪಾತಕೈಃ । ದೇಹಾನ್ತೇಮುಕ್ತಿಮಾಪ್ನೋತಿ ಶಿವವರ್ಮಾನುಭಾವತಃ ॥೩೨॥ ತ್ವಮಪಿ ಶ್ರದ್ಧಯಾ ವತ್ಸ ಶೈವಂ ಕವಚಮುತ್ತಮಮ್ । ಧಾರಯಸ್ವ ಮಯಾ ದತ್ತಂ ಸದ್ಯಃ ಶ್ರೇಯೋ ಹ್ಯವಾಪ್ಸ್ಯಸಿ ॥ **ಸೂತ ಉವಾಚ ॥** ಇತ್ಯುಕ್ತ್ವಾ

Sri Vidyabhavan Book Centre, Sringeri

CC-0. In Public Domain. Digitized by eGangotri
ಋಷಭೋ ಯೋಗಿನಸ್ತಸ್ಮೈ ಪಾಥಿವೇಪಸೂನವೇ । ದದೌ ಶಂಖಂ
ಮಹಾರಾವಂ ಖಡ್ಗಂ ಚಾರಿನಿಷೂದನಮ್ ॥೩೪॥ ಪುನಶ್ಚ ಭಸ್ಮ
ಸಂಮಂತ್ರ್ಯ ತದಂಗಂ ಪರಿತೋಽಸ್ಪೃಶತ್ । ಗಜಾನಾಂ ಷಟ್ಸಹಸ್ರಸ್ಯ
ದ್ವಿಗುಣಸ್ಯ ಬಲಂದದೌ ॥೩೫॥ ಭಸ್ಮಪ್ರಭಾವಾತ್ ಸಂಪ್ರಾಪ್ತಬಲೈಶ್ವರ್ಯ–
ಧೃತಿಸ್ಮೃತಿಃ ಸ ರಾಜಪುತ್ರಃ ಶುಶುಭೇ ಶರದರ್ಕ ಇವ ಶ್ರಿಯಾ ॥೩೬॥
ತಮಾಹ ಪ್ರಾಂಜಲಿಂ ಭೂಯಃ ಸ ಯೋಗೀ ನೃಪನಂದನಮ್ । ಏಷ
ಖಡ್ಗೋ ಮಯಾ ದತ್ತಃ ತಪೋ ಮಂತ್ರಾನುಭಾವಿತಃ ॥೩೭॥
ಶಿತಧಾರಮಿಮಂ ಖಡ್ಗಂ ಯಸ್ಮೈದರ್ಶಯಸೇ ಸ್ಫುಟಮ್ । ಸ
ಸದ್ಯೋಮ್ರಿಯತೇ ಶತ್ರುಃ ಸಾಕ್ಷಾನ್ಮೃತ್ಯುರಪಿ ಸ್ವಯಮ್ ॥೩೮॥ ಅಸ್ಯ
ಶಂಖಸ್ಯ ನಿರ್ಹ್ರಾದಂ ಯೇ ಶೃಣ್ವಂತಿ ತವಾಹಿತಾಃ । ತೇ ಮೂರ್ಛಿತಾಃ
ಪತಿಷ್ಯಂತಿನ್ಯಸ್ತಶಸ್ತ್ರಾ ವಿಚೇತನಾಃ ॥೩೯॥ ಖಡ್ಗಶಂಖಾವಿಮೌ
ದಿವ್ಯೌಪರಸೈನ್ಯ ವಿನಾಶನೌ ಆತ್ಮಸೈನ್ಯಸ್ವಪಕ್ಷಾಣಾಂ ಶೌರ್ಯತೇಜೋ–
ವಿವರ್ಧನೌ ॥೪೦॥ ಏತಯೋಶ್ಚಪ್ರಭಾವೇಣ ಶೈವೇನ ಕವಚೇನ ಚ ।
ದ್ವಿಷಟ್ಸಹಸ್ರ ನಾಗಾನಾಂ ಬಲೇನ ಮಹತಾಽಪಿ ಚ ॥೪೧॥ ಭಸ್ಮಧಾರಣ–
ಸಾಮರ್ಥ್ಯಾಚ್ಛತ್ರು ಸೈನ್ಯಂ ವಿಜೇಷ್ಯಸಿ । ಪ್ರಾಪ್ಯ ಸಿಂಹಾಸನಂ ಪಿತ್ರ್ಯಂ
ಗೋಪ್ತಾಽಸಿ ಪೃಥಿವೀಮೀಮಾವಮ್ ॥೪೨॥ ಇತಿ ಭದ್ರಾಯುಷಂ
ಸಮ್ಯಗನುಶಾಸ್ಯ ಸಮಾತೃಕಮ್ । ತಾಭ್ಯಾಂ ಸಂಪೂಜಿತಃ ಸೋಽಥ
ಯೋಗೀ ಸ್ವೈರಗತಿರ್ಯಯೌ ॥೪೩॥

ಇತಿ ಶ್ರೀ ಸ್ಕಾಂದಪುರಾಣೇ ಶಿವಕವಚಸ್ತೋತ್ರಂ ಸಂಪೂರ್ಣಂ

॥ ಭದ್ರಂ–ಶುಭಂ–ಮಂಗಲಂ ॥

CC-O. In Public Domain. Digitized by eGangotri

ಶಿವಕವಚದ ಭಾವಾನುವಾದ

ಶಿವಕವಚದಲ್ಲಿ ಮೂರು ಭಾಗಗಳಿವೆ. ಕವಚ ಸ್ತೋತ್ರ, ಶಿವಸಹಸ್ರಾಕ್ಷರಗದ್ಯಮಂತ್ರ ಹಾಗೂ ಫಲಶ್ರುತಿ. ಮೊದಲನೆಯ ಭಾಗದಲ್ಲಿ (ಶ್ಲೋಕ ೧–೨೭) ಭಕ್ತರು ಶಿವನ ಪುಣ್ಯಕರ ಹೆಸರುಗಳು, ತಮ್ಮ ಶರೀರದ ನಿರ್ದಿಷ್ಟ ಭಾಗವನ್ನು ರಕ್ಷಿಸಲಿ ಎಂದು ಬೇಡುವ ಬಗೆಯಿದೆ. ಸಹಸ್ರಾಕ್ಷರಗದ್ಯದಲ್ಲಿ ಶಿವನ ಮಹಾ ಮಹಿಮೆಯ ಸುಂದರ ವರ್ಣನೆಯಿದೆ (೨೮–೪೩): ಫಲಶ್ರುತಿಯಲ್ಲಿ ಈ ಶಿವಕವಚದ ಪಾರಾಯಣ ನೀಡುವ ಫಲಗಳ ನಿರೂಪಣೆಯಿದೆ.

ಋಷಭ ಮಹಾಮುನಿಗಳು ಭದ್ರಾಯುವಿಗೆ ಹೀಗೆ ಉಪದೇಶ ಮಾಡುತ್ತಾರೆ.

ಮೊದಲನೆಯದು ಸ್ತೋತ್ರದ ಹೊರಭಾಗವಾದ ಧ್ಯಾನ. ವಜ್ರದಂತೆ ಕಠಿಣವಾದ ದಂತಗಳುಳ್ಳ, ಮುಕ್ಕಣ್ಣನಾಗಿ ಕಾಲಕೂಟ ವಿಷವನ್ನು ಕೊರಳಲ್ಲಿ ಧರಿಸಿ ಶತೃಗಳನ್ನು ನಾಶಪಡಿಸುವ ಸಾವಿರಾರು ಕೈಗಳ ಉಮಾಪತಿಯಾದ ಶಂಭುವನ್ನು ಮನಸಾರೆ ನಮಸ್ಕರಿಸುತ್ತೇನೆ.

ಸಕಲ ಪುರಾಣಗಳ ರಹಸ್ಯೋಪದೇಶಗಳ ಸಾರಭೂತವಾದ ಇನ್ನೊಂದು ವಿಷಯವನ್ನು ನಿನಗೆ ಹೇಳುತ್ತೇನೆ. ಇದು ಪಾಪರಾಶಿಯನ್ನು ನಿಶ್ಶೇಷವಾಗಿ ಕಳೆಯುತ್ತದೆ. ಅತಿ ಪವಿತ್ರವೂ, ಜಯಪ್ರದವೂ, ಎಲ್ಲ ಆಪತ್ತುಗಳಿಂದ ಬಿಡುಗಡೆ ಮಾಡುವುದಕ್ಕೆ ಯೋಗ್ಯವೂ ಆದ ಶಿವಕವಚ ಸ್ತೋತ್ರವನ್ನು ನಿನ್ನ ಹಿತ–ಕ್ಷೇಮಗಳಿಗಾಗಿ ಉಪದೇಶ ಮಾಡುತ್ತೇನೆ.

(ಶಿವಕವಚದಲ್ಲಿ 27 ಶ್ಲೋಕಗಳಿವೆ. ಮೊದಲ ನಾಲ್ಕು ಎರಡು ಸಾಲಿನ ಅನುಷ್ಟುಪ್ ಶ್ಲೋಕಗಳು ಧ್ಯಾನವನ್ನು ಹೇಳುತ್ತವೆ).

೧. ವಿಶ್ವವನ್ನೆಲ್ಲಾ ವ್ಯಾಪಿಸಿರುವ ಮಹಾದೇವನನ್ನು ನಮಸ್ಕರಿಸಿ, ಮಾನವರನ್ನು ಸರ್ವದಾ ರಕ್ಷಿಸುವ (ಎಲ್ಲ ಕಡೆ ಕಾಪಾಡುವ) ಶಿವಕವಚ ಸ್ತೋತ್ರವನ್ನು ಉಪದೇಶಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೨. ಶುಚಿಯಾದ ಸ್ಥಳದಲ್ಲಿ ಸೂಕ್ತವಾದ ಆಸನದಲ್ಲಿ ಕುಳಿತವನಾಗಿ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಅವ್ಯಯನಾದ ಶಿವನನ್ನು ಪ್ರಾಣಾಯಾಮಪೂರ್ವಕವಾಗಿ ಧ್ಯಾನಮಾಡಬೇಕು.

೩. ಹೃದಯಕಮಲದ ಮಧ್ಯೆ ನೆಲೆಸಿ, ತನ್ನ ದಿವ್ಯಕಾಂತಿಯಿಂದ ಆಕಾಶವನ್ನೆಲ್ಲ ವ್ಯಾಪಿಸಿ, ಇಂದ್ರಿಯಗಳನ್ನು ಮೀರಿದ ಸೂಕ್ಷ್ಮತೆ ಉಳ್ಳ, ಕೊನೆಯಿಲ್ಲದ, ಜಗತ್ತಿಗೆಲ್ಲ ಕಾರಣನಾದ, ಆನಂದಸ್ವರೂಪನಾದ ಮಹಾದೇವನನ್ನು ನೆನೆಯಬೇಕು.

೪. ಧ್ಯಾನಮಾರ್ಗದಿಂದ ಕರ್ಮದ ಬಂಧನವನ್ನು ತೊಡೆದು ಹಾಕಿ, ಚಿನ್ಮಯವಾದ ಆನಂದದಲ್ಲಿ ಮುಳುಗಿದ ನಂತರ ಷಡಕ್ಷರ ಮಂತ್ರದ ನ್ಯಾಸದಿಂದ ಚಿತ್ತವನ್ನು ಸಮಾಧಾನಗೊಳಿಸಿ, ಶಿವಕವಚದಿಂದ ಆತ್ಮ ರಕ್ಷಣೆಯನ್ನು ಮಾಡಿಕೊಳ್ಳಬೇಕು.

೫. ಈ ಶ್ಲೋಕದಿಂದ ಶಿವಕವಚ ಪ್ರಾರಂಭವಾಗುತ್ತದೆ.

ಎಲ್ಲದೇವತೆಗಳಲ್ಲಿಯೂ ಇರುವ ಮಹಾದೇವನು ಆಳವಾದ ಸಂಸಾರ ಕೂಪದಲ್ಲಿ ಬಿದ್ದಿರುವ ನನ್ನನ್ನು ಕಾಪಾಡಲಿ; ಮಂತ್ರಗಳಿಗೆ ಮೂಲವಾದ ಆ ದೇವನ ದಿವ್ಯನಾಮವು ನನ್ನ ಹೃದ್ಗಯದೊಳಗಿನ ಸಕಲ ಪಾಪಗಳನ್ನೂ ತೊಳೆಯಲಿ.

೬. ಎಲ್ಲ ಕಡೆ ಇರುವವನೂ, ತೇಜೋರೂಪನೂ ಆದ, ಚಿದ್ ಘನ ಎಂದರೆ ಚಿತ್ ವಸ್ತುಗಳ ಸಾಂದ್ರರೂಪನಾದ ಆ ಸದಾಶಿವನು ನನ್ನನ್ನು ಎಲ್ಲ ಕಡೆ ಸಲಹಲಿ. ಸೂಕ್ಷ್ಮಾತಿಸೂಕ್ಷ್ಮನಾಗಿಯೂ, ಅಚಿಂತ್ಯಾದ್ಭುತ ಶಕ್ತಿಪಡೆದ ಈಶ್ವರನು ಸರ್ವಭಯಗಳಿಂದಲೂ ನನ್ನನ್ನು ರಕ್ಷಿಸಲಿ.

೭. ಯಾವ ಸದಾಶಿವನು ಭೂಮಿಯ ರೂಪದಿಂದ ಜಗತ್ತಿನ ಭಾರವನ್ನು ಹೊತ್ತಿದ್ದಾನೆಯೋ ಆ ಎಂಟು ರೂಪಗಳನ್ನು ಹೊಂದಿದವನು ಭೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಬಂಧವಾದ ಭಯದಿಂದ ನನ್ನನ್ನು ಸಲಹಲಿ; ಜಲರೂಪದಿಂದ ಜನರನ್ನು ಬದುಕಿಸುತ್ತಿರುವ ಆತನೇ ನನ್ನನ್ನು ಭಯದಿಂದ ಕಾಪಾಡಲಿ.

(ಅಷ್ಟಮೂರ್ತಿ ಎಂದರೆ ಇಲ್ಲಿ ಸೂರ್ಯ, ಚಂದ್ರ, ಪೃಥ್ವೀ, ನೀರು, ತೇಜಸ್ಸು ವಾಯು, ಆಕಾಶ, ಪುರುಷ ಎಂಬ ರೂಪಗಳು ಎಂಬರ್ಥ).

೮. ಜಗತ್ತಿನ ಒಂದೊಂದು ಕಲ್ಪ ಸಮಯದ ಕೊನೆಯಲ್ಲಿ ಬರುವ ಪ್ರಳಯ ಕಾಲದಲ್ಲಿ ಲೋಕಗಳನ್ನೆಲ್ಲಾ ಭಸ್ಮಮಾಡಿ, ಪ್ರಳಯ ತಾಂಡವ ಆಡುವ ಕಾಲರುದ್ರದೇವನು, ಕಾಡಿನ ಬೆಂಕಿ, ಸುಂಟರ ಗಾಳಿ ಮೊದಲಾದ ಉತ್ಪಾತಗಳ ಭಯದಿಂದ ನನ್ನನ್ನು ರಕ್ಷಿಸಲಿ.

೯. ಝಳಪಿಸುವ ಮಿಂಚಿನಂತೆ, ಹೊಳೆಯುವ ಚಿನ್ನದಂತೆ ಶೋಭೆಯುಳ್ಳ, ತನ್ನ ಕೈಗಳಿಂದ ವಿದ್ಯಾ, ವರ, ಅಭಯಗಳನ್ನು ತೋರಿಸುತ್ತಾ ಕೊಡಲಿಯನ್ನು ಧರಿಸಿರುವ, ನಾಲ್ಕು ಮುಖಗಳ 'ತತ್ಪುರುಷ' ನೆಂಬ ಸ್ವರೂಪದ ತ್ರಿನೇತ್ರನು ಪೂರ್ವ ದಿಕ್ಕಿನಲ್ಲಿ ನನ್ನನ್ನು ಸದಾ ಸಲಹಲಿ.

೧೦. ಕೊಡವಿ, ಗುರಾಣಿ, ಅಂಕುಶ, ಪಾಶ, ಶೂಲ, ಕಪಾಲ, ಢಮರು, ಜಪಮಣಿಗಳನ್ನು ಧರಿಸಿದ, ನಾಲ್ಮೊಗದ, ನೀಲವರ್ಣದ ಮುಕ್ಕಣ್ಣನು 'ಅಘೋರ' ನೆಂಬ ರೂಪದಿಂದ ದಕ್ಷಿಣ ದಿಕ್ಕಿನಲ್ಲಿ ನನ್ನನ್ನು ರಕ್ಷಿಸಲಿ.

೧೧. ಕುಂದಪುಷ್ಪ, ಚಂದ್ರ, ಶಂಖ, ಸ್ಫಟಿಕಶಿಲೆಗಳಂತೆ ಶುಭ ಶ್ವೇತವರ್ಣದ, ವೇದಗಳು, ಜಪಮಾಲೆ, ವರದಹಸ್ತ ಹಾಗೂ ಅಭಯಹಸ್ತಗಳಿಂದ ಕೂಡಿದ ನಾಲ್ಕು ಮುಖ, ಮೂರು ಕಣ್ಣುಗಳ ಸದ್ಯೋಜಾತರೂಪಿ ಶಿವನು ಪಶ್ಚಿಮ ದಿಕ್ಕಿನಲ್ಲಿ ನನ್ನನ್ನು ರಕ್ಷಿಸಲಿ.

೧೨. ವರದಹಸ್ತ, ಜಪಮಾಲೆಯನ್ನು ಧರಿಸಿದ ಹಸ್ತ, ಅಭಯ ಹಸ್ತ ಹಾಗೂ ಉಳಿಯನ್ನು ಹಿಡಿದ ಹಸ್ತಗಳಿಂದ ಕೂಡಿ ಕಮಲದೊಳಗಿನ ಕೇಸರದಂತೆ ಅರುಣಕಾಂತಿಯುಳ್ಳ, ನಾಲ್ಮೊಗದ ಮುಕ್ಕಣ್ಣನು ವಾಮದೇವ ರೂಪದಿಂದ ಉತ್ತರ ದಿಕ್ಕಿನಲ್ಲಿ ನನ್ನನ್ನು ರಕ್ಷಿಸಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

೧೩. ವೇದಹಸ್ತ ಅಭಯಹಸ್ತ ಇಷ್ಟಾರ್ಥಪ್ರದಹಸ್ತ ಅಂಕುಶ, ಉಳಿ, ಪಾಶ, ಕಪಾಲ, ಢಮರು, ಜಪಮಾಲೆ, ಶೂಲಗಳನ್ನು ಧರಿಸಿದ, ಶುಭ್ರವರ್ಣದ ಐದು ಮುಖಗಳುಳ್ಳ ಮಹಾನ್ ತೇಜಸ್ವಿಯಾದ ಈಶಾನ ರೂಪಿ ಶಿವನು ಮೇಲು ದಿಕ್ಕುಗಳಲ್ಲಿ ನನ್ನನ್ನು ರಕ್ಷಿಸಲಿ.

೧೪. ಚಂದ್ರಮೌಳಿಯು ನನ್ನ ಮೇಲ್ತಲೆಯನ್ನೂ, ಹಣೆಗಣ್ಣನು ನನ್ನ ಹಣೆಯನ್ನೂ, ಇಂದ್ರಗರ್ವಾಪಹಾರಿಯು ನನ್ನ ಕಣ್ಣುಗಳನ್ನೂ, ವಿಶ್ವಪತಿ (ಜಗದೊಡೆಯ)ಯಾದ ಶಿವನು ನನ್ನ ನಾಸಿಕವನ್ನೂ ಸದಾ ರಕ್ಷಿಸಲಿ.

೧೫. ವೇದವಂದ್ಯನಾದ ಶಿವನು ನನ್ನ ಕಿವಿಗಳನ್ನು ರಕ್ಷಿಸಲಿ. ಕಪಾಲವನ್ನು ಧರಿಸಿದ ಶಿವನು ನನ್ನ ಕಪೋಲವನ್ನು ರಕ್ಷಿಸಲಿ. ಪಂಚಮುಖಿಯಾದ ಶಿವನು ನನ್ನ ಮುಖವನ್ನು ರಕ್ಷಿಸಲಿ. ವೇದಗಳೇ ನಾಲಗೆಯಾಗುಳ್ಳ ಶಿವನು ನನ್ನ ಜಿಹ್ವೆಯನ್ನು ಕಾಪಾಡಲಿ.

೧೬. ಕೈಲಾಸನಾಥನಾದ ಶಿವನು ನನ್ನ ಕಂಠವನ್ನು ಕಾಪಾಡಲಿ. ಪಿನಾಕವೆಂಬ ಬಿಲ್ಲನ್ನು ಧರಿಸಿದ ಶಿವನು ನನ್ನ ಎರಡು ಕೈಗಳನ್ನು ಕಾಪಾಡಲಿ. ಧರ್ಮವೇ ಹೆಗಲಾಗಿ ಉಳ್ಳ ಶಿವನು ಭುಜಗಳನ್ನು ರಕ್ಷಿಸಲಿ. ದಕ್ಷಯಜ್ಞವನ್ನು ಭಂಗಿಸಿದ ಶಿವನು ನನ್ನ ಎದೆಯನ್ನು ಕಾಪಾಡಲಿ.

೧೭. ಮೇರುಪರ್ವತವನ್ನೇ ಬಿಲ್ಲಾಗಿಸಿಕೊಂಡ ಶಿವನು ನನ್ನ ಉದರವನ್ನು ಕಾಪಾಡಲಿ. ಮನ್ಮಥನನ್ನು ನಾಶಗೊಳಿಸಿದ ಶಿವನು ನನ್ನ ಶರೀರ ಮಧ್ಯವನ್ನು ರಕ್ಷಿಸಲಿ. ವಿನಾಯಕನ ತಂದೆಯಾದ ಶಿವನು ನನ್ನ ಹೊಕ್ಕಳನ್ನು ರಕ್ಷಿಸಲಿ. ಧೂಮ್ರವರ್ಣದ (ಹೊಗೆಯ ಬಣ್ಣದ) ಜಟೆಯುಳ್ಳ ಈಶ್ವರನು ನನ್ನ ಸೊಂಟವನ್ನು ರಕ್ಷಿಸಲಿ.

೧೮. ಕುಬೇರನ ಸ್ನೇಹಿತನಾದ ಶಿವನು ನನ್ನೆರಡು ತೊಡೆಗಳನ್ನೂ, ಜಗದೊಡೆಯನು ನನ್ನೆರಡು ಪೊಣಕಾಲುಗಳನ್ನೂ, ವೃಷಭಧ್ವಜನು ನನ್ನೆರಡು ಕಾಲುಗಳನ್ನೂ, ದೇವವಂದಿತಪಾದನಾದವನು ನನ್ನ ಹೆಜ್ಜೆಗಳನ್ನೂ ರಕ್ಷಿಸಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

೧೯. ಮಹೇಶ್ವರನು ದಿನದ ಮೊದಲ ಯಾಮದಲ್ಲೂ, ನಡುವಿನ ಯಾಮದಲ್ಲಿ ವಾಮದೇವನೂ, ತ್ರಿಣೇತ್ರನೂ ಮೂರನೆಯ ಯಾಮದಲ್ಲೂ, ವೃಷಭಧ್ವಜನಾದ ಶಿವನು ನಾಲ್ಕನೆಯ ಯಾಮದಲ್ಲೂ ನನ್ನನ್ನು ರಕ್ಷಿಸಲಿ.

೨೦. ಚಂದ್ರಶೇಖರನಾದ ಶಿವನು ರಾತ್ರಿಯ ಮೊದಲ ಭಾಗದಲ್ಲೂ, ಗಂಗಾಧರನು ನಡುರಾತ್ರಿಯಲ್ಲೂ, ಗೌರೀಪತಿಯು ರಾತ್ರಿಯ ಕೊನೆಯ ಭಾಗದಲ್ಲೂ, ಮೃತ್ಯುಂಜಯನು ಎಲ್ಲ ಕಾಲಗಳಲ್ಲಿಯೂ ನನ್ನನ್ನು ರಕ್ಷಿಸಲಿ.

೨೧. ಶಂಕರನು ನನ್ನನ್ನು ಒಳಗೂ, ಸ್ಥಾಣುವು ಹೊರಗಡೆಯಲ್ಲೂ, ಪಶುಪತಿಯು ನಡುವೆ ಇರುವಾಗಲೂ, ಸದಾಶಿವನು ಎಲ್ಲೆಲ್ಲಿಯೂ ಕಾಪಾಡಲಿ.

೨೨. ನಿಂತಾಗ ಲೋಕನಾಥನಾದ ಶಿವನೂ, ನಡೆಯುವಾಗ ಭೂತ ಗಣಾಧೀಶನೂ, ಕುಳಿತಾಗ ವೇದಾಂತ ವೇದ್ಯನೂ, ಮಲಗಿದಾಗ ಅವ್ಯಯನಾದ ಶಿವನೂ ನನ್ನನ್ನು ಸದಾ ಸಲಹಲಿ.

೨೩. ನೀಲಕಂಠನು ದಾರಿಯಲ್ಲೂ, ತ್ರಿಪುರಾರಿಯು ಬೆಟ್ಟದ ಹಾದಿಗಳಲ್ಲೂ, ಕಾಡಿನಲ್ಲಿ ಪ್ರಯಾಣ ಮಾಡುವಾಗ ಮೃಗವ್ಯಾಧ ರೂಪಿಯಾದ ಶಿವನು ನನ್ನನ್ನು ಸಲಹಲಿ.

೨೪. ಕಲ್ಪಾಂತದಲ್ಲಿ ಬ್ರಹ್ಮಾಂಡವನ್ನೇ ನಡುಗಿಸುವ ಮಹಾಕೋಪ ಹೊಂದಿದ ವೀರಭದ್ರರೂಪಿ ಶಿವನು ಶತ್ರುಸೇನೆಯೆಂಬ ಸಾಗರದ ಭಯದಿಂದ ಕಾಪಾಡಲಿ.

೨೫. ಶತ್ರುಸೈನ್ಯದಲ್ಲಿನ ಕಾಲಾಳುಗಳು, ಕುದುರೆ, ಆನೆ, ರಥಗಳಿಂದ ಭಯಂಕರವಾದ ಅಕ್ಷೌಹಿಣೀ ಸೇನೆಯನ್ನು ಮೃಡರೂಪಿ ಶಿವನು ತನ್ನ ಭಯಂಕರವಾದ ಕೊಡಲಿಯ ಹರಿತವಾದ ಅಲಗಿನಿಂದ ಕತ್ತರಿಸಲಿ.

೨೬. ಪ್ರಲಯಕಾಲದಲ್ಲಿ ಅಗ್ನಿಜ್ವಾಲೆಯಂತೆ ಭುಗಿಲೇಳುವ ತ್ರಿಪುರಾರಿಯ ತ್ರಿಶೂಲವು ಕಳ್ಳರನ್ನು ಸಂಹರಿಸಲಿ. ಹುಲಿ, ಸಿಂಹ, ಕರಡಿ, ತೋಳ ಮೊದಲಾದ ಕ್ರೂರಪ್ರಾಣಿಗಳನ್ನು ಶಿವನ ಪಿನಾಕಧನುಸ್ಸು ಬಿದರಿಸಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

೨೭. ಕೆಟ್ಟಕನಸು, ಕೆಟ್ಟಶಕುನ, ಕೆಟ್ಟಸ್ಥಿತಿ, ದುರ್ಮಾನ, ಕ್ಷಾಮ, ದುಃಖ ನೀಡುವ ಆಚಾರ, ಸಹಿಸಲಾರದ ಅಪಕೀರ್ತಿ, ಉತ್ಪಾತ ಬಾಧೆ, ವಿಷಭಯ, ದುಷ್ಟಗ್ರಹಬಾಧೆಗಳನ್ನೂ, ವ್ಯಾಧಿಗಳನ್ನೂ, ಸಕಲ ಲೋಕಗಳಿಗೆ ಒಡೆಯನಾದ ಮಹೇಶ್ವರನು ನಾಶಗೊಳಿಸಿ ರಕ್ಷಿಸಲಿ.

ಹೀಗೆ ಶಿವಕವಚ ಸ್ತೋತ್ರದ ನಂತರ ಶಿವಗದ್ಯ ಅಥವಾ ಸಹಸ್ರಾಕ್ಷರ ಮಂತ್ರ ಪ್ರಾರಂಭವಾಗುತ್ತದೆ.

ನಮ್ಮ ಉಪಯುಕ್ತ ಸ್ತೋತ್ರ ಪ್ರಕಟಣೆಗಳು :

- ಶ್ರೀ ಶಿವಸ್ತೋತ್ರಮಾಲಾ
- ಬಿಲ್ವಾಷ್ಟೋತ್ತರ ಶತನಾಮಪೂಜಾ
- ಸುಬ್ರಹ್ಮಣ್ಯ ಸ್ತೋತ್ರಮಾಲಾ
- ಶ್ರೀದೇವೀ ಸ್ತೋತ್ರಮಾಲಾ
- ಶ್ರೀ ದುರ್ಗಾ ಸ್ತೋತ್ರಮಾಲಾ
- ಶ್ರೀ ದುರ್ಗಾ ಸ್ತೋತ್ರಗಳು
- ಶ್ರೀ ದುರ್ಗಾ ಕವಚ
- ಶ್ರೀ ಗಾಯತ್ರೀ ಶಕ್ತಿ ಕವಚ
- ನಿತ್ಯ ಪ್ರಾರ್ಥನಾ
- ಸರ್ವಕಷ್ಟನಿವಾರಕ ದೇವತಾ ಸ್ತೋತ್ರಗಳು
- ಸಸ್ವರ ರುದ್ರತ್ರಿಶತೀನಾಮಾವಳಿಃ
- ಪ್ರಾತಃ ಸ್ಮರಾಮಿ -- ಸ್ತೋತ್ರ ಸಂಗ್ರಹ
- ಶ್ರೀ ಗಾಯತ್ರೀ ನಿತ್ಯಪೂಜಾ ವಿಧಾನ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಹಸ್ರಾಕ್ಷರ ಮಂತ್ರದ ಭಾವಾನುವಾದ

ಇದು ಸ್ತೋತ್ರದ ಮುಖ್ಯವಾದ ಭಾಗವೆನಿಸಿಕೊಂಡಿದೆ. ಭಗವಂತನ ನಾಮಸ್ಮರಣೆಯಿಂದ ಪಾಪರಾಶಿ ಕರಗಿ ಪುಣ್ಯ ಸಂಪಾದನೆಗೆ ಮಾರ್ಗವಾಗುತ್ತದೆ ಎಂಬುದು ಜ್ಞಾನಿಗಳ, ಋಷಿಗಳ, ಹಿರಿಯರ ಅರ್ಥಪೂರ್ಣ ನಂಬಿಕೆಯಾಗಿದೆ. 'ಸಹಸ್ರ' ಎಂಬುದನ್ನು ಇಲ್ಲಿ ಅಸಂಖ್ಯ ಎನ್ನುವ ಅರ್ಥದಲ್ಲಿ ಬಳಸಿದ್ದಾರೆ.

ಮಹರ್ಷಿ ಋಷಭರು ಭಗವಾನ್ ಶಂಕರನ ಮಹಿಮೆಯನ್ನು ಹಲವು ನಾಮಗಳ ಪುಣ್ಯಸ್ಮರಣೆಯಿಂದ ಕೊಂಡಾಡಿದ್ದಾರೆ.

ಭಗವಾನ್ - ಎಂದರೆ ಜ್ಞಾನ, ವೈರಾಗ್ಯ, ಯಶಸ್ಸು, ಸಂಪತ್ತು ಧರ್ಮ, ಐಶ್ವರ್ಯ – ಈ ಆರು ಪೂರ್ಣ ಗುಣಗಳಿಂದ ಭರಿತನಾದವನು ಎಂಬರ್ಥ.

ಶಿವ - ಎಂದರೆ ಮಂಗಳಕರ ಸದಾಶಿವ, ನಿತ್ಯಮಂಗಲ ಸ್ವರೂಪ.

ತತ್ವಾತ್ಮಕ - ಎಲ್ಲ ತತ್ವಗಳಿಗೊಡೆಯ.

ಮಂತ್ರಸ್ವರೂಪ - ಮಂತ್ರಗಳಲ್ಲಿ ತನ್ನ ದೈವೀಶಕ್ತಿಯನ್ನು ತುಂಬಿ ಫಲ ಕೊಡುವವನು.

ನೀಲಕಂಠ, ಪಾರ್ವತೀ ಮನೋಹರ–ಈ ವಿಶೇಷ ಗುಣಗಳಿಂದ ಶಂಕರನ ಸಗುಣ ರೂಪವನ್ನು ವರ್ಣಿಸಲಾಗಿದೆ.

ಪ್ರಣವಸ್ವರೂಪ, ಚಿದಾಕಾಶ–ಈ ಭಾಗದಲ್ಲಿ ಸುಗುಣ–ನಿರ್ಗುಣ ರೂಪಗಳೆರಡನ್ನೂ ವರ್ಣಿಸಿದ್ದಾರೆ.

ನೀರೂಪ, ನಿರಾಭಾಸ–ಇಲ್ಲಿ ಶಂಕರನ ಅದ್ವಿತೀಯ ಸ್ವರೂಪದ ವರ್ಣನೆ ಇದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಯ ಜಯ ಮಹಾರುದ್ರ - ಇಲ್ಲಿ ಸದಾಶಿವನ ಭಯಂಕರ ರೂಪಗಳ ವರ್ಣನೆಯಿದೆ. ಶತ್ರುನಾಶ, ಭೂತಬಾಧೆ, ಚೋರಭಯ ಇವುಗಳ ನಿವಾರಣೆ ಮಾಡಿ ಭಕ್ತನು ತನಗೆ ಚಿತ್ತ ಸಮಾಧಾನವನ್ನು ಮಾಡಲೆಂದು ಭಗವಂತನನ್ನು ಪ್ರಾರ್ಥಿಸುವ ಬಗೆಯಿದು.

ತ್ರ್ಯಂಬಕ, ತ್ರಿಣೇತ್ರ - ಇವುಗಳು ಶಿವನ ಬಾಹ್ಯರೂಪವಾದ ಮೂರು ಕಣ್ಣುಗಳ ಮುಖವನ್ನೇ ಅಲ್ಲದೆ ಜ್ಞಾನ, ಇಚ್ಛಾ ಹಾಗೂ ಕ್ರಿಯಾಶಕ್ತಿಗಳ ದ್ಯೋತಕವಾಗಿವೆ.

ಹೀಗೆ ಸಹಸ್ರಾಕ್ಷರ ಮಂತ್ರಭಾಗದಲ್ಲಿ ಭಗವಾನ್ ಸದಾಶಿವನ ಅದ್ಭುತ ಮಹಿಮಾನ್ವಿತ ರೂಪಗಳ ವರ್ಣನೆಯಿದೆ.

ಫಲಶೃತಿಯ ಭಾವಾನುವಾದ

ಶಿವಕವಚವು ಸ್ಕಾಂದಪುರಾಣದ ಬ್ರಹ್ಮೋತ್ತರಖಂಡದಲ್ಲಿ ಇರುವುದರಿಂದ ಶಿವಕವಚವನ್ನು ಋಷಭ ಮಹಾಮುನಿಗಳು ಭದ್ರಾಯುವಿಗೆ ಉಪದೇಶಿಸಿ, ಫಲವನ್ನು ನಿರೂಪಿಸಿದ್ದಾರೆ ಹಾಗೂ ಈ ಕಥೆಯನ್ನು ಸೂತಪುರಾಣಿಕರು ಶೌನಕ ಮೊದಲಾದ ಮುನಿಗಳಿಗೆ ನಿರೂಪಿಸಿ ಮೇಲೆ ಹೇಳಿದ ಫಲಶೃತಿಯನ್ನು ದೃಢಪಡಿಸಿದ್ದಾರೆ.

ಋಷಭ ಯೋಗಿಗಳು ಹೀಗೆ ಹೇಳುತ್ತಾರೆ :

೨೮. ಈ ಶಿವಕವಚವನ್ನು ನಿನಗೆ ಉಪದೇಶಿಸಿರುವೆ. ಇದು ಸಕಲ ಜೀವಿಗಳ ಸರ್ವವಿಧವಾದ ತೊಂದರೆಯನ್ನೂ ನಿವಾರಿಸುವ ರಹಸ್ಯವಾಗಿದೆ.

೨೯. ಯಾರು ಈ ಶ್ರೇಷ್ಠವಾದ ಶಿವಕವಚವನ್ನು ಸದಾ ಧರಿಸುತ್ತಾರೋ ಅವರಿಗೆ ಶಂಭುವಿನ ಕೃಪೆಯಿಂದ ಎಲ್ಲಿಯೂ ಭಯವುಂಟಾಗುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

೩೦. ಅಲ್ಪಾಯುಷಿಯಾಗಲಿ, ಸಾಯುವ ಘಳಿಗೆ ಬಂದವನಾಗಲಿ ಇದರ ಫಲದಿಂದ ಕೂಡಲೆ ಸುಖವನ್ನು ಹೊಂದಿ ದೀರ್ಘಾಯುಸ್ಸನ್ನು ಪಡೆಯುತ್ತಾನೆ.

೩೧. ಈ ಕವಚವು ಎಲ್ಲ ಬಗೆಯ ದಾರಿದ್ರ್ಯವನ್ನು ಕಳೆದು, ಕ್ಷೇಮವನ್ನು ಹೆಚ್ಚಿಸುವುದು. ಇದನ್ನು ಧರಿಸಿದವನು ದೇವತೆಗಳಿಂದಲೂ ಗೌರವಿಸಲ್ಪಡುತ್ತಾನೆ.

೩೨. ಶಿವಕವಚದ ಮಹಿಮೆಯಿಂದ ಪಾಪರಾಶಿ ಕಳೆಯುತ್ತದೆ. ಸಣ್ಣ ಪಾಪಗಳಿಂದ ಬಿಡುಗಡೆ ದೊರೆತು ದೇಹಾಂತದಲ್ಲಿ ಮೋಕ್ಷ ದೊರೆಯುತ್ತದೆ.

೩೩. ಮಗು ಭದ್ರಾಯು ! ಈ ಉತ್ತಮವಾದ ಶಿವಕವಚವನ್ನು ನೀನೂ ಶ್ರದ್ಧೆಯಿಂದ ಧರಿಸಿ ಬೇಗನೆ ಶ್ರೇಯಸ್ಸನ್ನು ಹೊಂದುತ್ತೀಯೆ.

ಹೀಗೆ ಋಷಭ–ಭದ್ರಾಯು ಸಂವಾದವನ್ನು ನಿರೂಪಿಸಿದ ಸೂತರು ಶೌನಕಾದಿ ಮುನಿಗಳಿಗೆ ಹೇಳುತ್ತಾರೆ.

೩೪. ಮುನಿಗಳೇ ! ಹೀಗೆ ಶಿವಕವಚವನ್ನುಪದೇಶಿಸಿದ ಋಷಭ ಯೋಗಿಶ್ವರರು ಭದ್ರಾಯುವಿಗೆ ಮಹಾಧ್ವನಿಯನ್ನು ಮಾಡುವ ಶಂಖವನ್ನೂ , ಶತ್ರುಸಂಹಾರ ಮಾಡುವ ಕತ್ತಿಯನ್ನೂ ಕೊಟ್ಟರು.

೩೫. ಅವರು ಶಿವಕವಚದಿಂದ ಮತ್ತೊಮ್ಮೆ ಭಸ್ಮವನ್ನು ಮಂತ್ರಿಸಿ ರಾಜಕುಮಾರನ ಮೈಗೆ ಲೇಪಿಸಿದರು. ಆದರಿಂದ ಆತನಿಗೆ ಆರು ಸಾವಿರ ಆನೆಗಳ ಬಲಕ್ಕೆ ಎರಡು ಪಟ್ಟು ಬಲವನ್ನು ಕೊಟ್ಟಂತಾಯ್ತು

೩೬. ಈ ಭಸ್ಮದ ಮಹಿಮೆಯಿಂದ ಆ ರಾಜಪುತ್ರನು ಬಲ, ಐಶ್ವರ್ಯ, ತಾಳ್ಮೆ ಅಮೋಘ ಸ್ಮರಣ ಶಕ್ತಿಗಳನ್ನು ಪಡೆದವನಾಗಿ ಶರತ್ಕಾಲದ ಸೂರ್ಯನಂತೆ ಪ್ರಕಾಶಿಸುತ್ತಿದ್ದನು.

Sri Vidyabharathi Book Centre, Sringeri

CC-0. In Public Domain. Digitized by eGangotri

೩೭-೩೮. ಕೈ ಜೋಡಿಸಿ ನಿಂತಿದ್ದ ಆ ರಾಜಪುತ್ರನನ್ನು ನೋಡಿದ ಯೋಗಿಗಳು ಮತ್ತೆ ಹೀಗೆಂದರು 'ಮಂತ್ರ ಮಹಿಮೆಯಿಂದ ಪೂರಿತವಾದ ಈ ಖಡ್ಗವನ್ನು ನಿನಗಿತ್ತಿದ್ದೇವೆ.

ಈ ಹರಿತ ಅಲುಗಿನ ಕತ್ತಿಯನ್ನು ಯುದ್ಧದಲ್ಲಿ ಯಾರ ಕಡೆ ತೋರಿಸುವಿಯೋ, ಆತನು ಮೃತ್ಯುದೇವತೆಯೇ ಆಗಿದ್ದರೂ ಕೂಡಲೇ ಸಾವನ್ನಪ್ಪುತ್ತಾನೆ.

೩೯. ಈ ಶಂಖದ ನಾದವನ್ನು ಕೇಳಿದ ಶತ್ರುಗಳು ತಮ್ಮ ಅಸ್ತ್ರಗಳನ್ನು ಎಸೆದು ಎಚ್ಚರದಪ್ಪಿ ಮೂರ್ಛೆ ಹೊಂದುತ್ತಾರೆ.

೪೦. ಈ ದಿವ್ಯ ಖಡ್ಗ–ಶಂಖಗಳು ಶತ್ರುಸೇನೆಯನ್ನು ನಾಶಪಡಿಸಿ, ನಿನ್ನ ಕಡೆಯ ಸೈನ್ಯದ ಶೌರ್ಯ, ತೇಜಸ್ಸುಗಳನ್ನು ಹೆಚ್ಚಿಸುತ್ತದೆ.

೪೧-೪೨. ಈ ದಿವ್ಯಾಯುಧಗಳ ಮಹಿಮೆಯಿಂದಲೂ, ಶಿವಕವಚದ ಪ್ರಭಾವದಿಂದಲೂ, ಹನ್ನೆರಡು ಸಾವಿರ ಆನೆಗಳ ಬಲ ಹೊಂದಿದ್ದರಿಂದಲೂ, ಭಸ್ಮಧಾರಣೆಯ ಬಲದಿಂದಲೂ ಶತ್ರುಸೈನ್ಯವನ್ನು ನೀನು ಜಯಿಸಿ, ತಂದೆಯ ಸಿಂಹಾಸನವನ್ನು ಪಡೆದವನಾಗಿ ಈ ಭೂಮಿಯನ್ನು ರಕ್ಷಿಸುವೆ.

೪೩. ಹೀಗೆ ತನ್ನ ತಾಯಿಯ ಜೊತೆಯಲ್ಲಿದ್ದ ಭದ್ರಾಯುವಿಗೆ ಉಪದೇಶ ಮಾಡಿ, ಅವರಿಬ್ಬರ ಪೂಜೆಯನ್ನು ಸ್ವೀಕರಿಸಿದ ಆ ಋಷಭ ಮಹಾಮುನಿಗಳು ತನ್ನ ಮನಸ್ಸಿಗೆ ಬಂದ ಕಡೆ ಹೊರಟು ಹೋದರು.

(ರಾಜ್ಯ ಕಳೆದುಕೊಂಡು, ತಾಯಿಯೊಡನೆ ದುಃಖಿತನಾಗಿ ತನ್ನಲ್ಲಿ ಬಂದ ರಾಜಕುಮಾರನಿಗೆ ಮಹಾನ್‌ಶಕ್ತಿ ಪ್ರಭಾವವುಳ್ಳ ಶಿವಕವಚವನ್ನು ಉಪದೇಶಿಸಿದ ಋಷಭ ಯೋಗಿಗಳು ಯಾವ ಪ್ರತಿಫಲವನ್ನೂ ಬಯಸದೆ ಹೊರಟು ಹೋದರು.)

ಶಿವಕವಚದ ಭಾವಾನುವಾದ ಮುಗಿಯಿತು.

CC-O. In Public Domain. Digitized by eGangotri

ಶ್ರೀ ಶಿವಾಷ್ಟೋತ್ತರ ಶತನಾಮಾವಳಿಃ

ಓಂ ಶಿವಾಯ ನಮಃ
ಮಹೇಶ್ವರಾಯ ನಮಃ
ಶಂಭವೇ ನಮಃ
ಪಿನಾಕಿನೇ ನಮಃ
ಶಶಿಶೇಖರಾಯ ನಮಃ
ವಾಮದೇವಾಯ ನಮಃ
ವಿರೂಪಾಕ್ಷಾಯ ನಮಃ
ಕಪರ್ದಿನೇ ನಮಃ
ನೀಲಲೋಹಿತಾಯ ನಮಃ
ಶಂಕರಾಯ ನಮಃ 10
ಶೂಲಪಾಣಯೇ ನಮಃ
ಖಟ್ವಾಂಗಿನೇ ನಮಃ
ವಿಷ್ಣುವಲ್ಲಭಾಯ ನಮಃ
ಶಿಪಿವಿಷ್ಟಾಯ ನಮಃ
ಅಂಬಿಕಾನಾಥಾಯ ನಮಃ
ಶ್ರೀಕಂಠಾಯ ನಮಃ
ಭಕ್ತವತ್ಸಲಾಯ ನಮಃ
ಭವಾಯ ನಮಃ
ಶರ್ವಾಯ ನಮಃ
ತ್ರಿಲೋಕೇಶಾಯ ನಮಃ 20
ಶಿತಿಕಂಠಾಯ ನಮಃ
ಶಿವಾಪ್ರಿಯಾಯ ನಮಃ
ಉಗ್ರಾಯ ನಮಃ
ಕಪರ್ದಿನೇ ನಮಃ
ಕಾಮಾರಯೇ ನಮಃ
ಅಂಧಕಾಸುರಸೂದನಾಯ ನಮಃ
ಗಂಗಾಧರಾಯ ನಮಃ

ಲಲಾಟಾಕ್ಷಾಯ ನಮಃ
ಕಾಲಕಾಲಾಯ ನಮಃ
ಕೃಪಾನಿಧಯೇ ನಮಃ 30
ಭೀಮಾಯ ನಮಃ
ಪರಶುಹಸ್ತಾಯ ನಮಃ
ಮೃಗಪಾಣಯೇ ನಮಃ
ಜಟಾಧರಾಯ ನಮಃ
ಕೈಲಾಸವಾಸಿನೇ ನಮಃ
ಕವಚಿನೇ ನಮಃ
ಕಠೋರಾಯ ನಮಃ
ತ್ರಿಪುರಾಂತಕಾಯ ನಮಃ
ವೃಷಾಂಕಾಯ ನಮಃ
ವೃಷಭಾರೂಢಾಯ ನಮಃ 40
ಭಸ್ಮೋದ್ಧೂಳಿತವಿಗ್ರಹಾಯ ನಮಃ
ಸಾಮಪ್ರಿಯಾಯ ನಮಃ
ಸ್ವರಮಯಾಯ ನಮಃ
ತ್ರಯಿಮೂರ್ತಯೇ ನಮಃ
ಅನೀಶ್ವರಾಯ ನಮಃ
ಸರ್ವಜ್ಞಾಯ ನಮಃ
ಪರಮಾತ್ಮನೇ ನಮಃ (ನಮಃ
ಸೋಮಸೂರ್ಯಾಗ್ನಿಲೋಚನಾಯ
ಹವಿಷೇ ನಮಃ
ಯಜ್ಞಮಯಾಯ ನಮಃ 50
ಸೋಮಾಯ ನಮಃ
ಪಂಚವಕ್ತ್ರಾಯ ನಮಃ
ಸದಾಶಿವಾಯ ನಮಃ
ವಿಶ್ವೇಶ್ವರಾಯ ನಮಃ

Sri Vidyabharathi Book Centre, Sringeri

CC-O. In Public Domain. Digitized by eGangotri

ವೀರಭದ್ರಾಯ ನಮಃ
ಗಣನಾಥಾಯ ನಮಃ
ಪ್ರಜಾಪತಯೇ ನಮಃ
ಹಿರಣ್ಯರೇತಸೇ ನಮಃ
ದುರ್ಧರ್ಷಾಯ ನಮಃ
ಗಿರೀಶಾಯ ನಮಃ
ಗಿರಿಶಾಯ ನಮಃ
ಅನಘಾಯ ನಮಃ
ಭುಜಂಗಭೂಷಣಾಯ ನಮಃ
ಭರ್ಗಾಯ ನಮಃ
ಗಿರಧನ್ವನೇ ನಮಃ
ಗಿರಿಪ್ರಿಯಾಯ ನಮಃ
ಕೃತ್ತಿವಾಸಸೇ ನಮಃ
ಪುರಾರಾತಯೇ ನಮಃ
ಭಗವತೇ ನಮಃ
ಪ್ರಮಥಾಧಿಪಾಯ ನಮಃ
ಮೃತ್ಯುಂಜಯಾಯ ನಮಃ
ಸೂಕ್ಷ್ಮತನವೇ ನಮಃ
ಜಗದ್ವ್ಯಾಪಿನೇ ನಮಃ
ಜಗದ್ಗುರವೇ ನಮಃ
ವ್ಯೋಮಕೇಶಾಯ ನಮಃ
ಮಹಾಸೇನಜನಕಾಯ ನಮಃ
ಚಾರುವಿಕ್ರಮಾಯ ನಮಃ
ರುದ್ರಾಯ ನಮಃ
ಭೂತಪತಯೇ ನಮಃ
ಸ್ಥಾಣವೇ ನಮಃ
ಅಹಿರ್ಬುಧ್ನಾಯ ನಮಃ

ದಿಗಂಬರಾಯ ನಮಃ
ಅಷ್ಟಮೂರ್ತಯೇ ನಮಃ
ಅನೇಕಾತ್ಮನೇ ನಮಃ
ಸಾತ್ತ್ವಿಕಾಯ ನಮಃ
ಶುದ್ಧವಿಗ್ರಹಾಯ ನಮಃ
60 ಶಾಶ್ವತಾಯ ನಮಃ
ಖಂಡಪರಶವೇ ನಮಃ
ಅಜಾಯ ನಮಃ
ಪಾಶವಿಮೋಚನಾಯ ನಮಃ 90
ಮೃಡಾಯ ನಮಃ
ಪಶುಪತಯೇ ನಮಃ
ದೇವಾಯ ನಮಃ
ಮಹಾದೇವಾಯ ನಮಃ
ಅವ್ಯಯಾಯ ನಮಃ
ಹರಯೇ ನಮಃ
70 ಪೂಷದಂತಭಿದೇ ನಮಃ
ಅವ್ಯಗ್ರಾಯ ನಮಃ
ದಕ್ಷಾಧ್ವರಹರಾಯ ನಮಃ
ಹರಾಯ ನಮಃ 100
ಭಗನೇತ್ರಭಿದೇ ನಮಃ
ಅವ್ಯಕ್ತಾಯ ನಮಃ
ಸಹಸ್ರಾಕ್ಷಾಯ ನಮಃ
ಸಹಸ್ರಪಾದೇ ನಮಃ
ಅಪವರ್ಗಪ್ರದಾಯ ನಮಃ
ಅನಂತಾಯ ನಮಃ
80 ತಾರಕಾಯ ನಮಃ
ಪರಮೇಶ್ವರಾಯ ನಮಃ 108

॥ ಶ್ರೀ ಶಿವಾಷ್ಟೋತ್ತರ ಶತನಾಮಾವಳಿಃ ಸಮಾಪ್ತಾ ॥

Sri Vidyabharathi Book Corner, Srirangapatna

CC-O. In Public Domain. Digitized by eGangotri

॥ಶ್ರೀ॥

ಶ್ರೀ ಇಂದ್ರಾಕ್ಷೀ ಸ್ತೋತ್ರಮ್

॥ಶ್ರೀಃ॥ ಅಸ್ಯಶ್ರೀ ಇಂದ್ರಾಕ್ಷೀಸ್ತೋತ್ರಮಹಾಮಂತ್ರಸ್ಯ ಸಹಸ್ರಾಕ್ಷಋಷಿಃ । ಇಂದ್ರಾಕ್ಷೀದೇವತಾ । ಅನುಷ್ಟುಪ್ ಛಂದಃ । ಮಹಾಲಕ್ಷ್ಮೀರ್ಬೀಜಂ। ಭುವನೇಶ್ವರೀತಿ ಶಕ್ತಿಃ। ಭವಾನೀತಿ ಕೀಲಕಂ।

ಓಂ ಶ್ರೀಂ– ಹ್ರೀಂ– ಕ್ಲೀಂ– ಇತಿ ಬೀಜಾನಿ। ಮಮ ಸರ್ವಾಭೀಷ್ಟ ಸಿದ್ಧ್ಯರ್ಥೇ ಜಪೇ ವಿನಿಯೋಗಃ॥

ಕರನ್ಯಾಸ

ಓಂ ಇಂದ್ರಾಕ್ಷೀ ಇತ್ಯಂಗುಷ್ಠಾಭ್ಯಾಂ ನಮಃ।

(ಹೆಬ್ಬೆರಳನ್ನು ಸ್ಪರ್ಶಿಸಿ)

ಓಂ ಮಹಾಲಕ್ಷ್ಮೀತಿ ತರ್ಜನೀಭ್ಯಾಂ ನಮಃ।

(ತೋರುಬೆರಳನ್ನು ಸವರಿ)

ಓಂ ಮಾಹೇಶ್ವರೀತಿ ಮಧ್ಯಮಾಭ್ಯಾಂ ನಮಃ।

(ನಡುಬೆರಳನ್ನು ಸ್ಪರ್ಶಿಸಿ)

ಓಂ ಅಂಬುಜಾಕ್ಷೀತಿ ಅನಾಮಿಕಾಭ್ಯಾಂ ನಮಃ।

(ಉಂಗುರದ ಬೆರಳನ್ನು ಸ್ಪರ್ಶಿಸಿ)

ಓಂ ಕಾತ್ಯಾಯನೀತಿ ಕನಿಷ್ಠಿಕಾಭ್ಯಾಂ ನಮಃ।

(ಕಿರುಬೆರಳನ್ನು ಸ್ಪರ್ಶಿಸಿ)

ಓಂ ಕೌಮಾರೀತಿ ಕರತಲಕರಪೃಷ್ಠಾಭ್ಯಾಂ ನಮಃ।

(ಅಂಗೈ ಹಾಗೂ ಪುಠಗೈಗಳನ್ನು ಸವರಿ)

Sri Vidyabharathi Foundation, Bangalore

CC-O. In Public Domain. Digitized by eGangotri

ಅಂಗನ್ಯಾಸ

ಓಂ ಇಂದ್ರಾಕ್ಷೀತಿ ಹೃದಯಾಯ ನಮಃ।

(ಎದೆಯನ್ನು ಸ್ಪರ್ಶಿಸಿ)

ಓಂ ಮಹಾಲಕ್ಷ್ಮೀತಿ ಶಿರಸೇ ಸ್ವಾಹಾ।

(ನೆತ್ತಿಯನ್ನು ಸ್ಪರ್ಶಿಸಿ)

ಓಂ ಮಾಹೇಶ್ವರೀತಿ ಶಿಖಾಯೈ ವೌಷಟ್।

(ಜುಟ್ಟಿನ ಭಾಗ ಸ್ಪರ್ಶಿಸಿ)

ಓಂ ಅಂಬುಜಾಕ್ಷೀತಿ ಕವಚಾಯ ಹುಮ್।

(ಎರಡು ತೋಳುಗಳನ್ನು ಸ್ಪರ್ಶಿಸಿ)

ಓಂ ಕಾತ್ಯಾಯನೀತಿ ನೇತ್ರತ್ರಯಾಯ ವಷಟ್।

(ಕಣ್ಣುಗಳನ್ನು ಸ್ಪರ್ಶಿಸಿ)

ಓಂ ಕೌಮಾರೀತಿ ಅಸ್ತ್ರಾಯ ಫಟ್।

(ತಲೆಯನ್ನು ಸುತ್ತು ಹಾಕಿ ಚಪ್ಪಾಳೆ ಹೊಡೆಯಬೇಕು)

ಓಂ ಭೂರ್ಭುವಃ ಸ್ವರೋಂ ಇತಿ ದಿಗ್ಬಂಧಃ।

ಕವಚಮ್

ಪೂರ್ವಸ್ಯಾಂ ಪಾತು ಮಾಂ ಬ್ರಾಹ್ಮೀ ಚಾಗ್ನೇಯ್ಯಾಂ ತು ಮಹೇಶ್ವರೀ।
ಕೌಮಾರೀ ಪಾತು ಯಾಮ್ಯೇ ವೈ ನೈಋತ್ಯಾಂ ಪಾತು ಭೈರವೀ॥

ಪಶ್ಚಿಮೇ ಪಾತು ವಾರಾಹಿ ವಾಯವ್ಯೇ ನಾರಸಿಂಹಿಕಾ।
ಕಾಲರಾತ್ರಿರುದೀಚ್ಯಾಂ ವಾ ಈಶಾನ್ಯಾಂ ಸರ್ವಶಕ್ತಿ ಧೃಕ್॥

ಊರ್ಧ್ವಂ ಮೇ ಭೈರವೀ ಪಾತು ಚಾದಃ ಸ್ಥಂ ವಿದ್ಧವಾಸಿನೀ।
ಯದ್ಯದ್ವಿಷಮಕಂ ಸ್ಥಾನಂ ತತ್ತದ್ರಕ್ಷತುಚೇಶ್ವರೀ॥

Sri Vidyabharathi Book Centre, Sringeri

CC-O. In Public Domain. Digitized by eGangotri

॥ अथ ध्यानम् ॥

ಇಂದ್ರಾಕ್ಷೀಂ ದ್ವಿಭುಜಾಂ ದೇವೀಂ ಪೀತವಸ್ತ್ರದ್ವಯನ್ವಿತಾಂ।
ವಾಮಹಸ್ತೇ ವಜ್ರಧರಾಂ ದಕ್ಷಿಣೇನ ವರಪ್ರದಾಂ॥

ಇಂದ್ರಾಕ್ಷೀಂ ಯುವತೀಂ ದೇವೀಂ ನಾನಾಲಂಕಾರಭೂಷಿತಾಂ।
ಪ್ರಸನ್ನವದನಾಂಭೋಜಾಮಪ್ಸರೋಗಣಸೇವಿತಾಮ್ ॥

ದ್ವಿಭುಜಾಂ ಸೌಮ್ಯವದನಾಂ ಪಾಶಾಂಕುಶಧರಾಂ ಪರಾಂ।
ತ್ರೈಲೋಕ್ಯಮೋಹಿನೀಂ ದೇವೀಂ ಇಂದ್ರಾಕ್ಷೀನಾಮಕೀರ್ತಿತಾಮ್ ॥

ಮಂತ್ರಃ :- ಓಂ ಐಂ ಹ್ರೀಂ ಶ್ರೀಂ ಕ್ಲೀಂ ಕ್ಲೈಂ ಇಂದ್ರಾಕ್ಷ್ಯೈ ನಮಃ॥

ಸ್ತೋತ್ರಂ

ಇಂದ್ರ ಉವಾಚ -

ಇಂದ್ರಾಕ್ಷೀ ನಾಮ ಸಾದೇವಿ ದೈವತೈಃ ಸಮುದಾಹೃತಾ।
ಗೌರೀ ಶಾಕಂಭರೀ ದೇವೀ ದುರ್ಗಾನಾಮ್ನೀತಿ ವಿಶ್ರುತಾ ॥ ೧ ॥

ಕಾತ್ಯಾಯನೀ ಮಹಾದೇವೀ ಚಂದ್ರಘಂಟಾ ಮಹಾತಪಾ।
ಸಾವಿತ್ರೀ ಸಾ ಚ ಗಾಯತ್ರೀ ಬ್ರಹ್ಮಾಣೀ ಬ್ರಹ್ಮವಾದಿನೀ ॥ ೨ ॥

ನಾರಾಯಣೀ ಭದ್ರಕಾಲೀ ರುದ್ರಾಣೀ ಕೃಷ್ಣಪಿಂಗಲಾ।
ಅಗ್ನಿಜ್ವಾಲಾ ರೌದ್ರಮುಖೀ ಕಾಲರಾತ್ರಿಸ್ತಪಸ್ವಿನೀ ॥ ೩ ॥

ಮೇಘಶ್ಯಾಮಾ ಸಹಸ್ರಾಕ್ಷೀ ಮುಕ್ತಕೇಶೀ ಜಲೋದರೀ।
ಮಹಾದೇವೀ ಮುಕ್ತಕೇಶೀ ಘೋರರೂಪಾ ಮಹಾಬಲಾ ॥ ೪ ॥

ಅಜಿತಾ ಭದ್ರದಾನಂದಾ ರೋಗಹಂತ್ರೀ ಶಿವಪ್ರಿಯಾ।
ಶಿವದೂತೀ ಕರಾಲೀ ಚ ಪ್ರತ್ಯಕ್ಷಾ ಪರಮೇಶ್ವರೀ ॥ ೫ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸದಾ ಸಂಮೋಹಿನೀ ದೇವೀ ಸುಂದರೀ ಭುವನೇಶ್ವರೀ।
ಇಂದ್ರಾಕ್ಷೀ ಇಂದ್ರರೂಪಾಚ ಇಂದ್ರಶಕ್ತಿಃ ಪರಾಯಣಾ ॥ ೬ ॥

ಮಹಿಷಾಸುರಸಂಹರ್ತ್ರೀ ಚಾಮುಂಡಾ ಗರ್ಭದೇವತಾ।
ವಾರಾಹೀ ನಾರಸಿಂಹೀ ಚ ಭೀಮಾ ಭೈರವನಾದಿನೀ ॥ ೭ ॥

ಶ್ರುತಿಃಸ್ಮೃತಿರ್ಧೃತಿರ್ಮೇಧಾ ವಿದ್ಯಾಲಕ್ಷ್ಮೀಃ ಸರಸ್ವತೀ।
ಅನಂತಾ ವಿಜಯಾ ಪೂರ್ಣಾ ಮಾನಸ್ತೋಕಾಽಪರಾಜಿತಾ ॥ ೮ ॥

ಭವಾನೀ ಪಾರ್ವತೀ ದುರ್ಗಾ ಹೈಮವತ್ಯಂಬಿಕಾ ಶಿವಾ।
ಏತೈನಾಮಶತೈರ್ದಿವ್ಯೈಃ ಸ್ತುತಾ ಶಕ್ರೇಣ ಧೀಮತಾ ॥ ೯ ॥

ಆಯುರಾರೋಗ್ಯಮೈಶ್ವರ್ಯಂ ವಿತ್ತಂ ಜ್ಞಾನಂ ಯಶೋ ಬಲಂ।
ನಾಭಿಮಾತ್ರಜಲೇ ಸ್ಥಿತ್ವಾ ಸಹಸ್ರಪರಿಸಂಖ್ಯಯಾ ॥ ೧೦ ॥

ಜಪೇತ್ ಸ್ತೋತ್ರಮಿದಂ ಮಂತ್ರಂ ವಾಚಾಂ ಸಿದ್ಧಿರ್ಭವೇತ್ತತಃ।
ಅನೇನ ವಿಧಿನಾ ಭಕ್ತ್ಯಾ ಮಂತ್ರಸಿದ್ಧಿಶ್ಚ ಜಾಯತೇ ॥ ೧೧ ॥

ಸಂತುಷ್ಟಾ ಚ ಭವೇದ್ದೇವೀ ಪ್ರತ್ಯಕ್ಷಾ ಸಂಪ್ರಜಾಯತೇ।
ಶತಮಾವರ್ಥಯೇದ್ಯಸ್ತು ಮುಚ್ಯತೇ ನಾತ್ರ ಸಂಶಯಃ ॥ ೧೨ ॥

ಆವರ್ತನ ಸಹಸ್ರೇಣ ಲಭ್ಯತೇ ವಾಂಛಿತಂ ಫಲಂ।
ಸಾಯಂ ಶತಂ ಪಠೇನ್ನಿತ್ಯಂ ಷಣ್ಮಾಸಾತ್ ಸಿದ್ಧಿರಿಷ್ಯತೇ ॥ ೧೩ ॥

ಚೋರವ್ಯಾಧಿಭಯಸ್ಥಾನೇ ಮನಸಾಹ್ಯನುಚಿಂತಯನ್।
ಸಂವತ್ಸರ ಮುಪಾಶ್ರಿತ್ಯ ಸರ್ವಕಾಮಾರ್ಥಸಿದ್ಧಯೇ।
ರಾಜಾನಂ ವಶ್ಯಮಾಪ್ನೋತಿ ಷಣ್ಮಾಸಾನ್ನಾತ್ರಸಂಶಯಃ ॥ ೧೪ ॥

॥ ಇತಿ ಶ್ರೀ ಇಂದ್ರಾಕ್ಷೀ ಸ್ತೋತ್ರಂ ಸಂಪೂರ್ಣಂ ॥

CC-O. In Public Domain. Digitized by eGangotri

ಶ್ರೀ ಇಂದ್ರಾಕ್ಷೀ ಸ್ತೋತ್ರದ ಭಾವಾನುವಾದ

ಇಂದ್ರಾಕ್ಷೀಸ್ತೋತ್ರಕ್ಕೆ ಸಹಸ್ರಾಕ್ಷನಾದ ಇಂದ್ರನೇ ಋಷಿ. ಇಂದ್ರಾಕ್ಷಿಯೇ ದೇವತೆ. ಅದು ಅನುಷ್ಟುಪ್ ಛಂದಸ್ಸಿನ ಬದ್ಧವಾಗಿದೆ. ಮಹಾಲಕ್ಷ್ಮೀ ಎಂಬುದು ಬೀಜಶಕ್ತಿ; ಭುವನೇಶ್ವರಿಯು ಮಂತ್ರ ಶಕ್ತಿಯಾಗಿದೆ.

'ಓಂ-ಶ್ರೀಂ-ಹ್ರೀಂ-ಕ್ಲೀಂ' ಇವು ಬೀಜಾಕ್ಷರಗಳೆನಿಸಿವೆ. ಅನಂತರ ಕರನ್ಯಾಸ–ಅಂಗನ್ಯಾಸಗಳು ಹೇಳಲ್ಪಟ್ಟಿವೆ. ಇಂದ್ರಾಕ್ಷೀ ಕವಚದಲ್ಲಿ ದೇವಿಯ ಹಲವು ಶುಭನಾಮಗಳನ್ನು ರಕ್ಷಣಾರ್ಥವಾಗಿ ದೇಹದ ವಿವಿಧ ಭಾಗಗಳಲ್ಲಿ ಧರಿಸಿದಂತೆ ಭಕ್ತಿಯಿಂದ ಭಾವಿಸಬೇಕು.

ಪೂರ್ವದಿಕ್ಕಿನಲ್ಲಿ – ಬ್ರಾಹ್ಮೀರೂಪ

ಆಗ್ನೇಯ (ಪೂರ್ವ–ದಕ್ಷಿಣಮೂಲೆ) – ಮಹೇಶ್ವರಿ

ದಕ್ಷಿಣದಲ್ಲಿ – ಕೌಮಾರೀ

ನೈಋತ್ಯಮೂಲೆ – ಭೈರವೀ

ಪಶ್ಚಿಮ – ವಾರಾಹೀ

ವಾಯವ್ಯ – ನಾರಸಿಂಹೀ

ಉತ್ತರ – ಕಾಲರಾತ್ರಿ

ಈಶಾನ್ಯ ದಿಕ್ಕಿನಲ್ಲಿ – ಸರ್ವಶಕ್ತಿಧಾರಿಣೀ

ಊರ್ಧ್ವಭಾಗ – ಭೈರವೀ

ಅಧೋಭಾಗ – ವಿಂಧ್ಯವಾಸಿನೀ

ತೊಂದರೆಕೊಡುವ ಸ್ಥಳಗಳಲ್ಲಿ–ಈಶ್ವರೀ–ರೂಪಗಳು ನಮ್ಮನ್ನು ಕವಚದಂತೆ ಸದಾ ಸಲಹಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಧ್ಯಾನ :- ಇಂದ್ರಾಕ್ಷೀದೇವಿಯು ಎರಡು ತೋಳುಗಳನ್ನು ಹೊಂದಿದ್ದಾಳೆ. ಪೀತಾಂಬರಗಳ ಜೊತೆಯನ್ನು ಧರಿಸಿದ್ದಾಳೆ. ಎಡಗೈಯಲ್ಲಿ ವಜ್ರಾಯುಧವಿದೆ. ಬಲಹಸ್ತದಲ್ಲಿ ವರದ ಭಂಗಿಯಿದೆ. ಯುವತಿಯ ರೂಪ ಆಕೆಯದು. ಸರ್ವಾಲಂಕಾರಭೂಷಿತೆಯಾಗಿ ಅಪ್ಸರೆಯರಿಂದ ಸೇವಿತಳಾಗಿದ್ದಾಳೆ. ಪಾಶ, ಅಂಕುಶಗಳನ್ನು ಧರಿಸಿರುವ ದೇವಿ ಮೂರು ಲೋಕಗಳನ್ನು ತನ್ನ ದಿವ್ಯ ಸೌಂದರ್ಯದಿಂದ ಆಕರ್ಷಿಸಿದ್ದಾಳೆ.

ಇಂದ್ರನು ಹೇಳುತ್ತಾನೆ :-

ಇಂದ್ರಾಕ್ಷೀ, ಗೌರೀ ಶಾಕಂಭರೀ, ದುರ್ಗಾ, ಕಾತ್ಯಾಯನೀ, ಮಹಾದೇವೀ ಮೊದಲಾದ ನೂರಾರು ಸಾವಿರಾರು ಪುಣ್ಯಕರ ನಾಮಗಳು ಆಕೆಗಿವೆ. ಭವಾನೀ, ಪಾರ್ವತೀ, ದುರ್ಗಾ, ಅಂಬಿಕಾ ಮೊದಲಾದವೂ ಆಕೆಯ ಹೆಸರುಗಳೇ.

ಹೀಗೆ ಇಂದ್ರದೇವನಿಂದ ಪ್ರಾರ್ಥಿತಳಾದ ಈಕೆಯ ಶುಭನಾಮಗಳನ್ನು ಸ್ಮರಿಸಿದರೆ ಆಯುಸ್ಸು, ಆರೋಗ್ಯ, ಐಶ್ವರ್ಯಗಳು ತಪ್ಪದೆ ದೊರೆಯುತ್ತವೆ.

ಈ ಸ್ತೋತ್ರವನ್ನು ನೀರಿನಲ್ಲಿ ನಾಭಿಯವರೆಗೆ ಮುಳುಗಿ ನಿಂತು ಸಾವಿರಬಾರಿ ಜಪಿಸಿದರಿ ವಾಕ್ಸಿದ್ಧಿಯಾಗುತ್ತದೆ ; ಮಂತ್ರಸಿದ್ಧಿಯೂ ದೊರೆಯುತ್ತದೆ. ಸಂತುಷ್ಟಳಾದ ದೇವಿ ದರ್ಶನ ನೀಡುತ್ತಾಳೆ. ಪ್ರತಿಸಂಜೆ ನೂರು ಸಲ ಜಪಿಸಿದರೆ, ಆರು ತಿಂಗಳಲ್ಲಿ ಸಿದ್ಧಿ ದೊರೆಯುತ್ತದೆ. ಕಳ್ಳರ ಭಯ, ವ್ಯಾಧಿ, ಮಾನಸಿಕ ಚಿಂತೆಗಳು—ಇವುಗಳು ಇಂದ್ರಾಕ್ಷೀ ಸ್ತೋತ್ರದ ಜಪದಿಂದ ದೂರವಾಗುತ್ತವೆ. ಆರೇ ತಿಂಗಳಲ್ಲಿ ಅಧಿಕಾರಗಳು, ರಾಜರೂ ವಶವಾಗುವರು.

ಇಂದ್ರಾಕ್ಷೀ ಸ್ತೋತ್ರದ ಭಾವಾನುವಾದ ಮುಗಿಯಿತು.

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

SRI SHIVAKAVACHAM - INDRAAKSHI STOTRAM

Sri Vidyabharathi Book Center, Sringeri ₹ 18.00

Designed & Printed at : Sree Venkateshwara Printing Press, Bangalore - 78. Ph : 26344763